(ಆ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಡಳಿತದ ದುರುಪಯೋಗ

+ ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಜಿಗಜಿಣಗಿ ಯವರು ಮಾತನಾಡುವುದು ಕಡಿಮೆ ಮಾಡಬೇಕು. ಸನ್ಮಾನ್ಯ ಉಪ ಸಭಾಧ್ಯಕ್ಷರೇ, ಕಳೆದ ಸದನದಲ್ಲಿ ನಾನು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಮತ್ತು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕಂತಹ ಅವ್ಯವಹಾರಗಳ ಬಗ್ಗೆ ಪ್ರಸ್ತಾಪ ಮಾಡಿದೆ. ತನಿಖೆ ಮಾಡುತ್ತೇನೆಂದು ಸಂಬಂಧಪಟ್ಟ ಮಂತ್ರಿಗಳವರು ಹೇಳಿದರು. ಇವತ್ತು ಆ ಮಂತ್ರಿಗಳು ಇಲ್ಲ. ನೀವು ಇದ್ದೀರಿ ಹಾಗಾದರೆ ನೀವೇ ಉತ್ತರ ಕೊಡುತ್ತೀರೋ? ನೀವೇ ಕೊಡಿ. ಸನ್ಮಾನ್ಯ ಉಪಸಭಾಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರತಕ್ಕಂತಹ ಅವ್ಯವಹಾರಗಳ ಬಗ್ಗೆ ರಾಜ್ಯಪಾಲರಿಗೆ ಒಂದು ಆರೋಪದ ಪಟ್ಟಿಯನ್ನು ಕೂಡ ಸಲ್ಲಿಸಲಾಗಿದೆ. ಇದೆಲ್ಲಾ ಘಟನೆ ಆದ ಮೇಲೆ ಹೋದ ಸಲ ನಾನು ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿ ಆದ ಮೇಲೆ ಮಾನ್ಯ ರಾಜ್ಯಪಾಲರಿಗೆ ಅಲ್ಲಿಂದ ಮೈಸೂರು ವಿಶ್ವವಿದ್ಯಾನಿಲಯದಿಂದ ಒಂದು ಆರೋಪ ಪಟ್ಟಿಯನ್ನು ಸುಮಾರು 16 ಜನ ಪ್ರೊಫೆಸರ್‌ಗಳು, ಸಾರ್ವಜನಿಕರು ಮತ್ತು ವಕೀಲರು ಎಲ್ಲಾ ಸೇರಿ ಕಳುಹಿಸಿದ್ದಾರೆ. ಅದರಲ್ಲಿ ಒಂದನೆಯ ಅಪವಾದ ಭ್ರಷ್ಟಾಚಾರ, ಹಣ ದುರುಪಯೋಗ ಮತ್ತು ದುರ್ಬಳಕೆ, ಕಾನೂನು ಬಾಹಿರ ಮತ್ತು ಅಕ್ರಮ ನೇಮಕಾತಿ, ಪರೀಕ್ಷೆ ಹಗರಣಗಳು. . . ಅಧ್ಯಕ್ಷರೇ, ಯಾರೂ ಗಮನಿಸುತ್ತಿಲ್ಲ, ಎಲ್ಲಾ ಮಂತ್ರಿಗಳು ಅವರವರ ವ್ಯವಹಾರದಲ್ಲಿ ಅವರಿದ್ದಾರೆ. ಉತ್ತರ ಕೊಡತಕ್ಕಂಥ ಮಂತ್ರಿಗಳೂ ಇಲ್ಲಿ ಇಲ್ಲ. ಮಂತ್ರಿಗಳಿಗೆ ಮಂತ್ರಿಗಿರಿ ಬಿಟ್ಟು ಬೇರೆ ಎಲ್ಲಾ ಕೆಲಸ ಇದೆ? ಒಂದನೇ ಆರೋಪ ಭ್ರಷ್ಟಾಚಾರ, ಹಣ ದುರುಪಯೋಗ ಮತ್ತು ದುರ್ಬಳಕೆ, ಕಾನೂನುಬಾಹಿರ ಮತ್ತು ಅಕ್ರಮ ನೇಮಕಾತಿ, ಪರೀಕ್ಷೆ ಹಗರಣಗಳು, ಸಿಂಡಿಕೇಟ್ ಸಭೆಗೆ ತಡೆಯೊಡ್ಡಿ, ಶೈಕ್ಷಣಿಕ ಮಂಡಳಿಯನ್ನು ಸಿಂಡಿಕೇಟ್ ಸಭೆಗೆ ಬಾರದೆ ಇರುವಂತೆ ಮಾಡಿರತಕ್ಕಂಥದ್ದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯಿದೆ ಉಲ್ಲಂಘನೆ, ಅಧಿಕಾರದ ದುರುಪಯೋಗ, ದುರ್ವರ್ತನೆ ಮತ್ತು ಶೈಕ್ಷಣಿಕ ಸ್ವಾತಂತ್ರ್ಯದ ಹರಣ ಎನ್ನತಕ್ಕಂಥ ಇಷ್ಟು ಆರೋಪ ಪಟ್ಟಿಯನ್ನು ಮಾನ್ಯ ರಾಜ್ಯಪಾಲರಿಗೆ ಮೈಸೂರಿನ ಪ್ರಮುಖ ನಾಗರೀಕರು ಮತ್ತು ಪ್ರೊಫೆಸರ್‌ಗಳು ಬರೆದು ಕಳುಹಿಸಿದ್ದಾರೆ. ಇದರ ಹಿಂದೆ ಇನ್ನೊಂದು ಆರೋಪ ಪಟ್ಟಿ ನಾನೇ ಹಿಂದೆ ಈ ಸದನದಲ್ಲಿ ಹೇಳಿದ ಆರೋಪ ಪಟ್ಟಿ ಕೂಡ ಇದೆ. ಇದೇ ಸದನದಲ್ಲಿ ಆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನೇನು ನಡೆಯುತ್ತಿದೆ ಅನ್ನತಕ್ಕಂಥದ್ದನ್ನು ನಾನು ಇನ್ನೊಂದು ಆರೋಪಪಟ್ಟಿಯನ್ನು ಹೇಳಿದೆ. ಅದರಲ್ಲಿ 1993–94ನೇ ಸಾಲಿನಲ್ಲಿ ತಾತ್ಕಾಲಿಕ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಮೀಸಲಾತಿ ನೀತಿಯನ್ನು ಗಾಳಿಗೆ ತೂರಿ ಮೆರಿಟ್ಟನ್ನೂ ಪರಿಗಣಿಸದೆ 80ಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕ ಮಾಡಿರತಕ್ಕಂಥದ್ದು, ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇದ್ದು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದಕ್ಕೆ ಒತ್ತಾಯ ಇದ್ದರೂ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದು. ಮಾದಯ್ಯನವರು 150ಕ್ಕೂ ಹೆಚ್ಚು ಬೋಧಕರ ಹುದ್ದೆಗಳಿಗೆ ಮೀಸಲಾತಿ ನೀತಿಯನ್ನು ಗಾಳಿಗೆ ತೂರಿ ಅಕ್ರಮ ನೇಮಕ ಮಾಡಿರುವುದು, 1992-

93ನೇ ಸಾಲಿನಲ್ಲಿ ಕನ್ನಡ ಎಮ್.ಎ.ಯಲ್ಲಿ ಚಿನ್ನದ ಪದಕ ಪಡೆದಿರುವ ನಂಜುಂಡಸ್ವಾಯಿ ಎಂಬ ದಲಿತ ವಿದ್ಯಾರ್ಥಿಗೆ ಪದಕ ನೀಡದೇ ಇರುವುದು, ದಾವಣಗೆರೆ ಜೆ.ಜೆ.ಎಮ್. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಆದ ಶ್ಯಾಮಲ ಕಾಲ್ ಗೋರಾಯಿ ಎಂಬುವರು ಆಪ್ಥಲ್ಮಾಲಜಿ ಎಂಬ ವಿಷಯದಲ್ಲಿ ಅನುತ್ತೀರ್ಣರಾಗಿದ್ದರೂ ನಾಲ್ಕು ಬಾರಿ ಮರು ಮೌಲ್ಯಮಾಪನ ಮಾಡಿ ಅಂಕಗಳನ್ನು ತಿದ್ದಿ ಪಾಸ್ ಮಾಡಿರುವುದು, ಅವರ ರಿಜಿಸ್ಟರ್ ನಂಬರ್ 27721992. ಕ್ರಿಕೆಟ್ ಸ್ಟೇಡಿಯಂ ಕಟ್ಟಿಸುತ್ತೇನೆಂದು ಹೇಳಿ ಮಣ್ಣನ್ನು ಮಾರಿಕೊಂಡು ಆಟದ ಮೈದಾನದಲ್ಲಿ ಒಂದು ಲೋಡ್ ಮಣ್ಣಿಗೆ 2,000 ರೂಪಾಯಿಯಂತೆ ಆರು ಸಾವಿರ ಲೋಡ್ ಮಣ್ಣು ಮಾರಿಕೊಂಡಿದ್ದಾರೆ. ಗಂಗೋತ್ರಿಗೆ ಬೇಲಿ ಹಾಕಿಸುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಕಮಿಷನ್ ಪಡೆದಿದ್ದಾರೆ ಎಂಬ ಆರೋಪ ಇದೆ. ಇದರ ಬಗ್ಗೆ ತನಿಖೆ ಆಗಬೇಕು. ಸುಮಾರು 40 ಲಕ್ಷಕ್ಕೂ ಹೆಚ್ಚು ಕಾಮಗಾರಿಗಳನ್ನು ಟೆಂಡರ್ ಕರೆಯದೆ ಕೆಲಸ ಮಾಡಿಸಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆಸಿದ್ದಾರೆಂದು ತಿಳಿದು ಬಂದಿದೆ. ತಕರಾರು ಇದ್ದ ಬಿಲ್‌ಗಳನ್ನು ಪಾವತಿ ಮಾಡಲು ಒಂದು ಕೋಟಿ ರೂಪಾಯಿ ಹಣವನ್ನು ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಖಾತೆಯಿಂದ ವಿ.ವಿ.ಕ್ಕೆ ವರ್ಗಾಯಿಸಿಕೊಂಡು ಸುಮಾರು 20 ಲಕ್ಷ ರೂಪಾಯಿಗಳ ಅವ್ಯವಹಾರ ನಡೆಸಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ನಿಯಮ ಬಾಹಿರವಾಗಿ ತಮ್ಮ ಮಗಳಿಗೆ ಪಾಸ್ ಮಾಡಿಸಿರುವುದು ಇವೆಲ್ಲಾ ಮಹಾನಂದಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮೈಸೂರು ವಿ.ವಿ. ಗ್ರಂಥಾಲಯದಲ್ಲಿ ಪುಸ್ತಕಗಳ ಬೈಂಡಿಂಗ್ ಮಾಡಿಸುವ ನೆಪದಲ್ಲಿ ಒಂದು ಪುಸ್ತಕಕ್ಕೆ 35 ರೂಪಾಯಿಗಳಂತೆ ಎರಡು ಲಕ್ಷಕ್ಕೂ ಹೆಚ್ಚು ಪುಸ್ತಕ ಬೈಂಡಿಗ್ ಮಾಡಿಸುತ್ತಾ ಲಕ್ಷಾಂತರ ರೂಪಾಯಿಗಳನ್ನು ಕಮಿಷನ್ ಹೊಡೆದಿರುತ್ತಾರೆ. ಇದರ ಬಗ್ಗೆ ಎರಡು ಸಮಿತಿಗಳನ್ನು ಸರ್ಕಾರ ನೇಮಕ ಮಾಡಿತು. ಒಂದು ವಿಕ್ರಾಂತ್ ಟ್ಯೆರ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಶ್ರೀ ಕೆ.ಕೆ. ಮಿಶ್ರರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮತ್ತು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಶರ್ಮವರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಈ ಎರಡು ಸಮಿತಿಗಳು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಕೂಡ ಹಲವಾರು ಅಪಾದನೆಗಳ ಬಗ್ಗೆ ಗಮನಕ್ಕೆ ಬಂದಿದ್ದರೂ ಕೂಡ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅದರ ಜೊತೆಗೆ ಮೌಲ್ಯ ಮಾಪನ ಮಾಡ ತಕ್ಕಂಥ ಸಂದರ್ಭದಲ್ಲಿ ಉತ್ತರ ಪತ್ರಿಕೆಗಳನ್ನು ಅವರಿಗೆ ಇಷ್ಟ ಬಂದ ರೀತಿಯಲ್ಲಿ ಮೌಲ್ಯ ಮಾಪನ ಮಾಡಿ ಬ್ಲಾಂಕ್ ಇರತಕ್ಕಂತಹ ಮಾರ್ಕ್ಸ್ ಶೀಟ್‌ಗೆ ಸಹಿ ಹಾಕಿರತಕ್ಕಂತಹ ಒಂದು ಪ್ರಕರಣವನ್ನು ತನಿಖೆ ಮಾಡಲಿಕ್ಕೆ ಎಂದು ಐದು ಜನರ ಸಮಿತಿಯನ್ನು ನೇಮಿಸಲಾಗಿತ್ತು. ಆ ಐದು ಜನ ಸಮಿತಿಯ ನೇಮಕಾತಿಯಲ್ಲಿ ಆ ಸಮಿತಿಯಲ್ಲಿ ಒಬ್ಬರಾಗಿದ್ದ ನಂಜುಂಡ ರಾಜ್ ಅರಸ್ ಎನ್ನ ತಕ್ಕಂತಹವರು ಈ ಸಮಿತಿಯ ತನಿಖೆ ಬಗ್ಗೆ ತಮ್ಮ ಗುಮಾನಿಯನ್ನು ಮತ್ತು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಒಂದು ಪತ್ರ ಬರೆದಿದ್ದಾರೆ. 25.3.1996ರಂದು ಮೈಸೂರು ಯೂನಿವರ್ಸಿಟಿಯ ರಿಜಿಸ್ಟ್ರಾರ್‌ರವರಿಗೆ ಒಂದು ಪತ್ರ ಬರೆದು ಈ ತನಿಖೆಯಲ್ಲಿ ನನಗೆ ನಂಬಿಕೆ ಇಲ್ಲ, ಈ ತನಿಖೆಯನ್ನು ಸ್ವತಂತ್ರವಾಗಿ ಮಾಡಲಿಕ್ಕೆ ಉಪಕುಲಪತಿಯವರು ಬಿಡತಕ್ಕಂತಹ ಯಾವುದೇ ಸಾಧ್ಯತೆಗಳು ಇಲ್ಲ.

ಆದ್ದರಿಂದ ನಾನು ಈ ತನಿಖಾ ಸಮಿತಿಗೆ ರಾಜೀನಾಮೆ ಕೊಡುತ್ತಿದ್ದೇನೆಂದು ಹೇಳಿ 25.3.1996ರಂದು ನಂಜುಂಡರಾಜ್ ಅರಸ್‌ರವರು ಪತ್ರ ಬರೆದಿದ್ದಾರೆ. ಇದರ ಅರ್ಥ ಏನು ಎಂದರೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಯಾವುದೇ ರೀತಿಯ ತನಿಖೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ. ಮಾನ್ಯ ಅಧ್ಯಕ್ಷರೇ, ಮತ್ತೆ ಮಾದಯ್ಯನವರ ಎಡ ಮತ್ತು ಬಲ ಕಾಂಟ್ರಾಕ್ಟ್ ಕೆಲಸ ಮಾಡುತ್ತಾ ಇರತಕ್ಕಂಥ ಪ್ರೊ. ಒ. ಅನಂತ ರಾಮನ್ ಎಂಬುವರು ವಿದ್ಯಾರ್ಥಿಗಳನ್ನು ಪಾಸ್ ಮಾಡಿಸಲಿಕ್ಕೆ ಹಣ ತೆಗೆದುಕೊಂಡು ಮಾರ್ಕ್ಸ್ ತಿದ್ದಲಿಕ್ಕೆ ವ್ಯವಹಾರ ಮಾಡಿದ್ದಾರೆ ಎನ್ನುವುದಕ್ಕೆ ನನ್ನ ಹತ್ತಿರ ಒಂದು ಪುರಾವೆ ಇದೆ. ನಾಗರಾಜ್ ಎಂದು ಹೇಳುತ್ತಾ ಇರತಕ್ಕಂಥ ಒಬ್ಬರು ಮದ್ರಾಸ್‌ನಿಂದ ದಿನಾಂಕ 12-2-1995ರಂದು ಒಂದು ಪತ್ರವನ್ನು ಬರೆದಿದ್ದಾರೆ. ಅದು ಈ ರೀತಿ ಇದೆ.

"To the Prof. O. Anantharamaiah, Department of History, Manasa Gangothri, Mysore:

Respected Sir, Hope this letter finds you in good health. After my fruitful meeting with you, I contacted some of my friends in Bangalore and Madras. The response is very good. They are ready to make arrangement for money if I gave them the guarantee. I told them that last year 12 students got second class and two got first class with your help. Mr. Krishnappa has also conveyed same message to them. I have said still more regarding the details of payment. I will talk to you over phone either next sunday or monday night."

This is the letter written by one Mr. Nagaraj to Mr. O. Anantharamaiah who was incharge of valuation.

ಹೇಗೆ ಹಣ ತೆಗೆದುಕೂಂಡು ಪಾಸ್ ಮಾಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಮತ್ತು ವಿಶ್ವವಿದ್ಯಾನಿಲಯದವರು ಒಂದು ಮೆಡಿಕಲ್ ಕಾಲೇಜಿನಲ್ಲಿ ಫೇಲ್ ಆದಂಥ ವಿದ್ಯಾರ್ಥಿಯನ್ನು ಪಾಸ್ ಮಾಡಲಿಕ್ಕೆ ದಿನಾಂಕ 11.10.93ರಂದು ಒಂದು ನೋಟನ್ನು ಹಾಕಿದ್ದಾರೆ. ಆ ನೋಟ್ ಏನಿದೆ ಎಂದರೆ:

"The case of malpractice against K.M. Neeta Muthaiah, Third year B.E. (Architect) student from Malnad College of Engineering, Hassan, with Register No. 4558 is treated as closed. The candidate has given satisfactory explanation vide her statement dated 10-10-93. Accordingly, you are hereby directed to announce the result of the candidate."

ಮಾಲ್‌ಪ್ರ್ಯಾಕ್ಟೀಸ್‌ನಲ್ಲಿ ಸಿಕ್ಕಿ ಹಾಕಿಕೊಂಡು ಫೇಲ್ ಆಗಿದ್ದವರ ರಿಸಲ್ಟ್‌ನ್ನು ತಡೆ ಹಿಡಿದಿದ್ದರೆ ಅದನ್ನು

ಕೊಡಿ ಎಂದು ಈ ರೀತಿಯಾಗಿ ಯೂನಿವರ್ಸಿಟಿಯಿಂದ ನೋಟ್ ಬರುತ್ತದೆ. ಸನ್ಮಾನ್ಯ ಸಭಾಧ್ಯಕ್ಷರೇ, ಇದರ ಜೊತೆಗೆ ಮೈಸೂರು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ಯಾವ ಯಾವ ರೀತಿಯಲ್ಲಿ ಅನುಕೂಲಗಳನ್ನು ಕೊಟ್ಟಿದೆ, ಹಾಗೆ ಹಣ ಕೊಟ್ಟಂಥ ಸಂದರ್ಭದಲ್ಲಿ ಆ ಹಣ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿರತಕ್ಕಂಥ ಶ್ರೀಮಾನ್ ಮಾದಯ್ಯನವರು ಆ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯಾದಂಥ ಹಣವನ್ನು ಹೋಗದ ಹಾಗೆ ಮಾಡಿದ್ದಾರೆ. ಮತ್ತು ಮುಕ್ತ ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ಅಲ್ಲಿ ಇದ್ದಂಥ ಲೈಬ್ರರಿಯನ್ನು ಎಷ್ಟು ಅಮಾನುಷವಾಗಿ ಒಡೆದು ಹಾಕಿ ಬೀದಿಗೆ ಬಿಸಾಕಿದ್ದಾರೆಂದು ಪತ್ರಿಕೆಗಳಲ್ಲಿ ಫೋಟೋ ಕೂಡ ಬಂದಿದೆ. ಜ್ಞಾನದೇಗುಲ ಗರ್ಭಗುಡಿಗೆ ಸಂಚಕಾರ. ಲೈಬ್ರರಿಯನ್ನು ಒಡೆದು ಹಾಕಿ ಅದರಲ್ಲಿದ್ದಂಥ ಪುಸ್ತಕಗಳನ್ನು ಬಜಾರಿಗೆ ಹಾಕಿ ಲಕ್ಷಾಂತರ ರೂಪಾಯಿಯ ಪುಸ್ತಕಗಳು ಮಳೆಯಲ್ಲಿ ನೆನೆದು ಹಾಳಾಗುವಂಥ ರೀತಿಯಲ್ಲಿ ಮಾದಯ್ಯನವರ ಆಜ್ಞೆಯ ಮೇರೆಗೆ ಆಗಿದೆ. ಸನ್ಮಾನ್ಯ ಸಭಾಧ್ಯಕ್ಷರೇ, ಇದಾದ ಮೇಲೆ ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಸಿದ್ಧವಾಗುತ್ತಿರುವ 3ನೇ ದೋಣಿ ವಿಹಾರ ಕೇಂದ್ರ ಕಟ್ಟಿಸಲಿಕ್ಕೆ ಮಾದಯ್ಯನವರ ಹುನ್ನಾರ; ಅದಕ್ಕೆ ಲಕ್ಷಾಂತರ ರೂಪಾಯಿ ಖರ್ಚು. ಕಳೆದ ವರ್ಷ ಇದೇ ವಿಷಯವಾಗಿ ನಮ್ಮ ಶಿಕ್ಷಣ ವಿಷಯ ಸಮಿತಿಗೆ ಮಾದಯ್ಯನವರು ಒಂದು ಲೆಕ್ಕ ಕೊಟ್ಟಿದ್ದರು. ಪ್ರತಿ ವರ್ಷ ಸ್ವೀಮಿಂಗ್–ಪೂಲ್ ಮೆಂಟೇನನ್ಸ್‌ಗೆ ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಲೆಕ್ಕ ಕೊಟ್ಟಿದ್ದಾರೆ. ಸ್ವೀಮಿಂಗ್‌ಪೂಲ್ ಮೆಂಟೇನನ್ಸ್ ಏನು ಎಂದರೆ ಬ್ಲೀಚಿಂಗ್ ಪೌಡರ್ ಹಾಕಿ ತೊಳೆದು ನೀರು ಬಿಡುವುದು ಅಷ್ಟೆ. ಮತ್ತು ಅಲ್ಲಿರತಕ್ಕಂಥ ಕೆಲಸಗಾರರಿಗೆ ಯೂನಿವರ್ಸಿಟಿ ಸಂಬಳ ಕೊಡುತ್ತದೆ. ಎಲ್ಲಾ ಕೊಡುತ್ತದೆ. ಅದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿರತಕ್ಕಂಥ ಸ್ವೀಮಿಂಗ್ ಪೂಲ್‌ಗೆ ಸಾರ್ವಜನಿಕರು ಹೋಗುತ್ತಾರೆ ಹಾಗೂ ಅದಕ್ಕೆ ನಿಗದಿಯಾದಂತೆ ಫೀಸ್ ಕಲೆಕ್ಷನ್ ಮಾಡುತ್ತಾರೆ. ಅದರಿಂದ ದುಡ್ಡು ಬರುತ್ತದೆ. ಇಷ್ಟಾದರೂ ಕೂಡ ಎರಡೂವರೆಲಕ್ಷ ರೂಪಾಯಿ ಮೆಂಟೇನನ್ಸ್‌ಗೆ ಎಂದು ಸರ್ಕಾರದಿಂದ ಯುನಿವರ್ಸಿಟಿ ಹಣ ಖರ್ಚು ಮಾಡುತ್ತದೆ. ಇದೇ ರೀತಿಯಲ್ಲಿ ಬಾಸ್ಕೆಟ್ ಬಾಲ್ ಗ್ರೌಂಡ್ ಲೆವಲ್ ಮಾಡುವುದಕ್ಕೆ ಮೂರುಲಕ್ಷ ರೂಪಾಯಿ ಖರ್ಚು ತೋರಿಸಿದ್ದಾರೆ. ಈ ಹಣವನ್ನು ಯಾವ ರೀತಿಯಾಗಿ, ಯಾವ ಕಾರಣಕ್ಕಾಗಿ ಖರ್ಚು ಮಾಡುತ್ತಿದ್ದಾರೆಂದು ನನ್ನ ಹತ್ತಿರ ಪಟ್ಟಿ ಇದೆ. ಆದರೆ ಸಮಯದ ಅಭಾವದಿಂದ ಪಟ್ಟಿಯನ್ನು ಓದುತ್ತಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರಿಗೆ ಎರಡು ಮೂರು ಸಲ ಇದರ ಬಗ್ಗೆ ಅವರು ಮನವಿ ಮಾಡಿದ್ದಾರೆ. ಆರೋಪ ಪಟ್ಟಿಯನ್ನು ಮಾಡಿದ್ದಾರೆ. ಮತ್ತೆ ಗಾಂಧೀಭವನದ ಪ್ರಕರಣ ತಮಗೆ ಗೊತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನದಲ್ಲಿ ಗಾಂಧೀ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡದಂಥ ರೀತಿಯಲ್ಲಿ ಮಾದಯ್ಯನವರು ತಡೆ ಹಿಡಿದಿದ್ದಾರೆ. ಅಲ್ಲಿ ಒಂದು ವಿಚಾರ ಸಂಕೀರ್ಣ ನಡೆಸಲು ಬಿಡಲಿಲ್ಲ. ಅಂತರ್ ಜಾತೀಯ ವಿವಾಹವನ್ನು ಅಲ್ಲಿ ಮಾಡಲು ಗಾಂಧೀ ಭವನ ಕೇಳಿದರೆ ಅವರು ಕೊಡಲಿಲ್ಲ. ಇನ್ನೊಂದು ಉದಾರಣೆಯನ್ನು ಹೇಳುವುದಾದರೆ ಸಿಂಡಿಕೇಟ್ ಮೆಂಬರ್ಸ್ ಎಲ್ಲಾ ಸೇರಿ ರಾಜ್ಯಪಾಲರಿಗೆ ಒಂದು ಪತ್ರವನ್ನು ಬರೆದಿದ್ದಾರೆ:-

"Attention of your Excellency is solicited to the fall of the rule of law in the Crawford Hall. On April 20, 1996 an unlawful crowd consising of some university officials, loyalists, professors, merit-promotion aspirants and Crawford Hall clerks blockaded the entry of two Syndicate members to the scheduled meeting of University Syndicates. During the duty hours, they carried objectionalble playcard, shouted slogans and prevented the holding of the Syndicate meeting through their actions."

ಅಂದರೆ ಯಾವ ರೀತಿ ಮಾದಯ್ಯನವರು ಪ್ರಜಾಪ್ರಭುತ್ವ ರೀತಿಯಲ್ಲಿ ಆ ಸಮಿತಿಗಳನ್ನು ಕೆಲಸ ಮಾಡದೇ ಇರತಕ್ಕಂಥ ರೀತಿಯಲ್ಲಿ ಕೆಲಸಗಳನ್ನು ತಡೆಹಿಡಿದಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಇದರ ಬಗ್ಗೆ ರಾಜ್ಯಪಾಲರಿಗೆ 26.4.1996ರಂದು ಒಂದು ಪತ್ರವನ್ನು ಬರೆದಿದ್ದಾರೆ. ನಾಲ್ಕೈದು ವರ್ಷಗಳಿಂದ ಇಷ್ಟೆಲ್ಲಾ ಅವ್ಯವಹಾರಗಳ ಆಪಾದನೆಗಳು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮೇಲೆ ಇದೆ. ನಾಲ್ಕೈದು ವರ್ಷದಲ್ಲಿ ಎಂಭತ್ತು ವರ್ಷದ ಭವ್ಯ ಇತಿಹಾಸ ಇರತಕ್ಕಂಥ ಮೈಸೂರು ವಿಶ್ವವಿದ್ಯಾನಿಲಯವನ್ನು ಸಂಪೂರ್ಣವಾಗಿ ನಾಶವಾಗಿ ಮಾಡಿದ್ದಾರೆ. ಶ್ರೀಮಾನ್ ಮಾದಯ್ಯನವರು. ಅದರ ಜೊತೆಗೆ ವಿಶ್ವವಿದ್ಯಾನಿಲಯದ ಆ ವಾತಾವರಣ ಸಂಪೂರ್ಣವಾಗಿ ಕಲುಷಿತಗೊಂಡು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇದ್ದಂಥ ಆ ಘನತೆ, ಆ ಗೌರವ, ಆ ಭವ್ಯ ಪರಂಪರೆ ಮಾದಯ್ಯನವರ ಕಾಲದಲ್ಲಿ ಸಂಪೂರ್ಣವಾಗಿ ನಾಶವಾಗಿದೆ. ಇಷ್ಟಾದರೂ ಕೂಡ ಸರ್ಕಾರ ಅವರಿಗೆ ಮತ್ತೆ ಮೂರು ವರ್ಷಗಳ ಕಾಲ ಅವರ ಅವಧಿಯನ್ನು ವಿಸ್ತರಣೆ ಮಾಡಿರತಕ್ಕಂಥದ್ದನ್ನು ನೋಡಿದರೆ ಸರ್ಕಾರದ ಕ್ರೆಡೆನ್‌ಷಿಯಲ್ ಬಗ್ಗೆ, ಇಂಟಿಗ್ರೆಟ್ ಬಗ್ಗೆ ಇವೊತ್ತು ನಾವು ಗಂಭೀರವಾಗಿ ಪ್ರಶ್ನೆ ಮಾಡುವಂಥ ಪರಿಸ್ಥಿತಿ ಬಂದಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇರತಕ್ಕಂಥ ವಿದ್ಯಾರ್ಥಿ–ಗಳು, ಉಪನ್ಯಾಸಕರು ಎಲ್ಲರೂ ಕೂಡ ಮಾದಯ್ಯನವರ ಮೇಲೆ ಇಷ್ಟೆಲ್ಲಾ ಆಪಾದನೆ ಮಾಡಿದ್ದಾರೆ, ಸಾರ್ವಜನಿಕರು ಮಾಡಿದ್ದಾರೆ, ನಮ್ಮ ಮಿತ್ರರಾದ ಪುಟ್ಟಣ್ಣಯ್ಯನವರೂ ಕೂಡ ಇದೇ ಸದನದಲ್ಲಿ ಆರೋಪವನ್ನು ಮಾಡಿದ್ದಾರೆ, ಮಾನ್ಯ ಪುಟ್ಟೇಗೌಡರೂ ಕೂಡ ಮಣ್ಣು ಎತ್ತತಕ್ಕಂಥ ವಿಚಾರದಲ್ಲಿ ಮಾದಯ್ಯನವರು ಎಷ್ಟೆಲ್ಲಾ ಅವ್ಯವಹಾರ ಮಾಡಿದ್ದಾರೆ, ಎಂದು ಇದೇ ಸದನದಲ್ಲಿ ಹೇಳಿದ್ದಾರೆ. ನಾವೆಲ್ಲರೂ ಸೇರಿ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಆಗ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಮಾದಯ್ಯ-ನವರ ಕಾರ್ಯವೈಖರಿಯ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದ ಎಕನಾಮಿಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸುಮಾರು ಎಂಟು ವರ್ಷದಿಂದ ಒಂದು ರೀಡರ್ ಪೋಸ್ಟ್ ಖಾಲಿ ಇದೆ. ಅದಕ್ಕೆ ಅಲ್ಲಿ ಒಬ್ಬ ಎಲಿಜಿಬಲ್ ಇರತಕ್ಕಂಥ ವ್ಯಕ್ತಿ ಇದ್ದಾರೆ. ಅವರಿಗೆ ಆ ರೀಡರ್ ಪೋಸ್ಟ್ ಸಿಗುತ್ತದೆಂದು ಹೇಳಿ ಅದನ್ನು ತಪ್ಪಿಸಲಿಕ್ಕೆ ಉದ್ದೇಶಪೂರ್ವಕವಾಗಿ ಮೂರು ಸಲ

ಇಂಟರ್‌ವ್ಯೂ ಡೆಫರ್ ಮಾಡಿದ್ದಾರೆ. ನಾಲ್ಕನೇ ಸಲ ಮೊನ್ನೆ ಇಂಟರ್‌ವ್ಯೂ ಆಗಿದೆ. ಈಗಲೂ ಕೂಡ ಅವರಿಗೆ ಕೊಡುವುದಿಲ್ಲ ಎಂದು ನನಗೆ ನಂಬಿಕೆ ಇದೆ. ಅಂದರೆ ಯಾವ ರೀತಿಯಿಂದ ಈ ಮನುಷ್ಯ ತನಗೆ ಆಗದವರನ್ನು ತುಳಿಯುತ್ತಾನೆ ಎನ್ನುವುದರ ಬಗ್ಗೆ ಉದಾಹರಣೆ ಕೊಟ್ಟಿದ್ದೇನೆ. ಇಷ್ಟೊತ್ತು ನಿಮ್ಮ ಸರ್ಕಾರದ ಪರವಾಗಿ ನೀವೇ ನೇಮಿಸಿದಂಥ ಶರ್ಮಾರವರ ನೇತೃತ್ವದ ಸಮಿತಿ ಅಲ್ಲಿ ತನಿಖೆ ಮಾಡಲಿಕ್ಕೆ ಹೋದಾಗ ಮಾನ್ಯ ಶರ್ಮಾರವರು ಆ ವಿಶ್ವವಿದ್ಯಾನಿಲಯದ ಆವರಣದಲ್ಲೇ ಉಪ ಕುಲಪತಿಗಳಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ವ್ಯಕ್ತಿಗಳಿಗೆ ಅಲ್ಲೇ ಭೀಮಾರಿ ಹಾಕಿ ನೀವು ಇನ್ನು ಮುಂದೆ ಈ ರೀತಿ ನಡೆದುಕೊಂಡರೆ ನಿಮ್ಮ ಮೇಲೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿ ಬಂದಿದ್ದಾರೆ. ಕೆ.ಕೆ. ಮಿಶ್ರಾರವರೂ ಕೂಡ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ಘಟನೆಗಳ ಬಗ್ಗೆ ಅಲ್ಲಿ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಇದರ ಜೊತೆಗೆ ಸನ್ಮಾನ್ಯ ಉಪಾಧ್ಯಕ್ಷರೇ, ಸಿಂಡಿಕೇಟ್ ಸಭೆಯಲ್ಲಿ ತನಗೆ ವಿರುದ್ಧವಾಗಿ ಮಾತನಾಡಿದ ಸಿಂಡಿಕೇಟ್ ಸದಸ್ಯರ ಮೇಲೆ ಗೂಂಡಾ-ಗಳನ್ನು ಬಿಟ್ಟು ದಾಳಿ ಮಾಡಿಸಿರತಕ್ಕಂಥದ್ದು ಹಲವಾರು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಅವರ ಬಗ್ಗೆ ಕೂಡ ಕ್ರಮ ತೆಗೆದುಕೊಂಡಿಲ್ಲ. ಯಾವ ಅಭಿಮಾನ ಯಾವ ಪ್ರೀತಿ ಮಾದಯ್ಯನವರ ಮೇಲೆ ಸರ್ಕಾರಕ್ಕೆ ಇದೆ ಎಂದು ನಮಗೆ ಗೊತ್ತಾಗುತ್ತಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಇದ್ದಂಥ ಸಂದರ್ಭ-ದಲ್ಲಿ ಈ ವಿಷಯ ಚರ್ಚೆಯಾಗಿತ್ತು. 23ನೇ ವಾರ್ಷಿಕೋತ್ಸವ ಸಮಾರಂಭಕ್ಕೆಂದು ಒಂದು ಟ್ರಸ್ಟನ್ನು ನೇಮಕ ಮಾಡಿದ್ದರು.

ಶ್ರೀ ಶ್ರೀರಾಮರೆಡ್ಡಿ (ಮುಂಮ):- ಆ ಟ್ರಸ್ಟ್‌ನಲ್ಲಿ 19 ಲಕ್ಷ ರೂ. ಗಳು ಇತ್ತು. ಈ ಹಣ-ದಲ್ಲಿಯೇ ಯಾವುದೇ ದಾಖಲೆ ಇಲ್ಲದೇ 2 ಲಕ್ಷ ರೂ. ಗಳನ್ನು ಖರ್ಚು ಮಾಡಿ ಉಳಿದ 17 ಲಕ್ಷ ರೂ. ಗಳನ್ನು ಡ್ರಾ ಮಾಡಲಿಕ್ಕೆ ಎಲ್ಲಾ ತಯಾರಿಯನ್ನು ನಡೆಸಿ ಕಡತವನ್ನು ಮಾನ್ಯ ಮುಖ್ಯಮಂತ್ರಿ-ಗಳಿಗೆ ಕಳುಹಿಸಿದ್ದರು. ಆಗ ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭ ದಲ್ಲಿಯೇ ನಾವು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆ ಹಣವನ್ನು ಬಿಡುಗಡೆ ಮಾಡ ಬಾರದೆಂದು ಮುಖ್ಯಮಂತ್ರಿಗಳ ಮೇಲೆ ನಾವು ಒತ್ತಾಯವನ್ನು ತಂದಿದ್ದೇವೆ. ಮಾನ್ಯ ಪುಟ್ಟೇಗೌಡರೂ ಕೂಡ ಆ ವಿಷಯವನ್ನು ಇಲ್ಲಿ ಹೇಳಿದ್ದರು. ಇಷ್ಟೆಲ್ಲಾ ನಡೆದಿದ್ದರೂ ಕೂಡ ಆ ಉಪಕುಲಪತಿಗಳನ್ನು ಮೈಸೂರು ವಿಶ್ವವಿದ್ಯಾಲಯದಲ್ಲಿ ಇನ್ನೂ ಏಕೆ ಇಟ್ಟುಕೊಂಡಿದ್ದಾರೆ ಇಷ್ಟೆಲ್ಲಾ ಆಪಾದನೆಗಳು ಇವೆ, ಇದು ಬಹಿರಂಗ ಸತ್ಯವಾಗಿರುವಂಥವುಗಳು, ಇದನ್ನು ಯಾವುದನ್ನೂ ಮುಚ್ಚಿಡತಕ್ಕಂಥವುಗಳಲ್ಲ, ಎಲ್ಲವೂ ಬಹಿರಂಗವಾಗಿರತಕ್ಕಂಥ ಆರೋಪಗಳೇ ಇವೆ. ತನಿಖೆ ಮಾಡಿರತಕ್ಕಂಥ ವರದಿಗಳೂ ಕೂಡ ಇವೆ, ಇಷ್ಟೆಲ್ಲಾ ಆದರೂ ಕೂಡ ಆ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯ ಬಗ್ಗೆ ಏಕೆ ಸರ್ಕಾರಕ್ಕೆ ಅಭಿಮಾನ ಇದೆ ಎಂಬುದನ್ನು ನಾನು ಕೇಳುತ್ತಿದ್ದೇನೆ. ಬಹುಶಃ ನಾನು 3ನೇ ಬಾರಿ ಮೈಸೂರು ವಿಶ್ವವಿದ್ಯಾಲಯದ ಬಗ್ಗೆ ಈ ಸದನದಲ್ಲಿ ಮಾತನಾಡುತ್ತಿರುವುದು. ಮೈಸೂರು ವಿಶ್ವವಿದ್ಯಾ-ಲಯ ಎಂದರೆ ಇದು ಭಾರತದಲ್ಲೇ ಮಾತ್ರವಲ್ಲ ಇಡೀ ಜಗತ್ತಿನ ವಿಶ್ವವಿದ್ಯಾಲಯಗಳ ಇತಿಹಾಸದಲ್ಲೇ

ಅದಕ್ಕೊಂದು ಪ್ರತ್ಯೇಕವಾದಂಥ ಸ್ಥಾನ ಇದೆ, ಭವ್ಯ ಪರಂಪರೆ ಇದೆ ಈ ಜಗತ್ತಿನಲ್ಲಿರತಕ್ಕಂಥ ಮಹಾನ್ ವಿದ್ವಾಂಸರುಗಳು, ವಿಜ್ಞಾನಿಗಳು, ಎಲ್ಲರೂ ಕೂಡ ಇಲ್ಲಿಯೇ ಓದಿದಂಥವರು ಇದ್ದಾರೆ. ಇದಕ್ಕಾಗಿಯೇ ಈ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕವಾದಂಥ ಸ್ಥಾನವಿದೆ ನಮ್ಮ ದೇಶದಲ್ಲಿ ಮತ್ತು ಜಗತ್ತಿನಲ್ಲಿ ಇಂಥ ಒಂದು ವಿಶ್ವವಿದ್ಯಾಲಯದಲ್ಲಿ ಇಂಥ ಒಬ್ಬ ಭ್ರಷ್ಟನನ್ನು ಇಟ್ಟುಕೊಂಡಿರುವುದು ಸರಿಯಲ್ಲ. ಏಕೆಂದರೆ ಈತ ಮಾಡದೇ ಇರತಕ್ಕಂಥ ಭ್ರಷ್ಟಾಚಾರದ ವ್ಯವಹಾರಗಳೇ ಇಲ್ಲ. ಇಂಥ ಒಬ್ಬ ಭ್ರಷ್ಟನನ್ನು ಇನ್ನೂ ಏಕೆ ಇಟ್ಟುಕೊಂಡಿದ್ದೀರೋ ನನಗಂತೂ ಅರ್ಥವಾಗುತ್ತಿಲ್ಲ. ಸರ್ಕಾರದವರೇನೋ ನಾವು ಮತ್ತೆ ಇದರ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಹೇಳಬಹುದು. ಆದರೆ ನಾನು ಅದನ್ನು ಒಪ್ಪುವುದಿಲ್ಲ. ಏಕೆಂದರೆ ಈಗಾಗಲೇ ತನಿಖೆ ಮಾಡಿ ಬಂದಿರತಕ್ಕಂಥ ವರದಿಗಳು ಇವೆ. ನಾನು ಸರ್ಕಾರದಲ್ಲಿ ಸ್ಪಷ್ಟವಾಗಿ ತಿಳಿಯಬಯಸುವುದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ, ಕಾನೂನು ದುರುಪಯೋಗ ಆಗುತ್ತಿರುವ ಬಗ್ಗೆ ಮತ್ತು ಪ್ರಜಾಪ್ರಭುತ್ವ ವಾತಾವರಣವನ್ನು ಕುಲಪತಿಗಳು ಕೆಡಿಸಿರುವ ಬಗ್ಗೆ ಪ್ರಾಮಾಣಿಕವಾಗಿ ತನಿಖೆಯನ್ನು ಮಾಡಬೇಕು ಎನ್ನುವ ಇಚ್ಛೆ ಸರ್ಕಾರಕ್ಕೆ ಇದ್ದಿದ್ದೇ ಆದರೆ ತಕ್ಷಣ ಆ ಉಪಕುಲಪತಿಯನ್ನು ಸಸ್ಪೆಂಡ್ ಮಾಡಬೇಕು ಅಥವಾ ಸಸ್ಪೆಂಡ್ ಮಾಡುವುದಕ್ಕೆ ಕಾನೂನಿನಲ್ಲಿ ನಿಮಗೆ ಅವಕಾಶವಿಲ್ಲದಿದ್ದರೆ ಉಪಕುಲಪತಿಗಳಿಗೆ ರಜೆಯ ಮೇಲೆ ಹೋಗಲಿಕ್ಕೆ ಹೇಳಿ ಮತ್ತೆ ನೀವು ತನಿಖೆಯನ್ನು ಮಾಡಿದ್ದೇ ಆದರೆ ಅಲ್ಲಿ ನಡೆದಿರುವ ಘಟನೆಗಳ ಬಗ್ಗೆ ಸತ್ಯಾಸತ್ಯತೆಗಳನ್ನು ಹೊರಗೆಳೆಯಲಿಕ್ಕೆ ಸಾಧ್ಯವಾಗುತ್ತದೆಯೇ ಹೊರತು ಉಪಕುಲಪತಿಗಳನ್ನೇ ನೀವು ಅಲ್ಲೇ ಇಟ್ಟುಕೊಂಡು ನಾವು ತನಿಖೆಯನ್ನು ಮಾಡುತ್ತೇವೆ ಮತ್ತು ಸತ್ಯಾಂಶವನ್ನು ಹೊರಗೆ ತರುತ್ತೇವೆ ಎಂದು ಹೇಳಿದರೆ ಇದು ಖಂಡಿತವಾಗಿಯೂ ಸಾಧ್ಯವಾಗಲಾರದು. ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ದುಡ್ಡನ್ನು ಹೊಡೆಯುತ್ತಾರೆ, ಮಾರ್ಕ್ಸ್ ಕಾರ್ಡ್‌ನ್ನು ತಿದ್ದುತ್ತಾರೆ. ಬ್ಲಾಂಕ್ ಮಾರ್ಕ್ಸ್ ಶೀಟ್‌ನಲ್ಲಿ ಸಹಿಯನ್ನು ಮಾಡಿ ಕಳುಹಿಸಿರತಕ್ಕಂಥದ್ದನ್ನು ನಾನು ನಿಮಗೆ ಕಳುಹಿಸುತ್ತೇನೆ ಮಾನ್ಯ ಅಧ್ಯಕ್ಷರೇ ನೀವು ಪರಿಶೀಲಿಸಬಹುದು, ಈ ರೀತಿಯ ವ್ಯವಸ್ಥೆ ಭಾರತ ದೇಶದ ಯಾವುದೇ ವಿಶ್ವವಿದ್ಯಾಲಯದಲ್ಲಿ ಇದೆಯೇ ಎನ್ನುವುದನ್ನು ತಾವು ಗಮನಿಸಬೇಕು. ಆದರೆ ಇವರು ಬ್ಲಾಂಕ್ ಮಾರ್ಕ್ಸ್ ಶೀಟ್‌ಗೆ ಸಹಿಯನ್ನು ಮಾಡಿ ಕಳುಹಿಸಿದ್ದಾರೆ. ಇದನ್ನು ಯಾವುದಾದರೂ ದೇಶದ ಇತಿಹಾಸದಲ್ಲಿ ನೀವು ನೋಡಿದ್ದೀರಾ? ಯಾರು ಎಷ್ಟು ಬೇಕಾದರೂ ಮಾರ್ಕ್ಸ್ ಹಾಕಿಕೊಳ್ಳಬಹುದು, ಯಾರು ಬೇಕಾದರೂ ಮಾರ್ಕ್ಸ್ ಕಾರ್ಡ್‌ನ್ನು ಸೃಷ್ಟಿ ಮಾಡಬಹುದು. ನೋಟ್‌ನ್ನು ಕಳುಹಿಸುತ್ತಾರೆ ಯುನಿವರ್ಸಿಟಿಯಿಂದ ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೆ ಯಾವುದಾದರೂ ಉಂಟೇ? ಇಂಥ ವಿದ್ಯಾರ್ಥಿಗೆ ನೀವು ಪಾಸ್ ಮಾಡಲೇಬೇಕು ಎಂದು ಹೇಳಿ ಮೈಸೂರು ವಿಶ್ವವಿದ್ಯಾಲಯದ ಲೆಟರ್ ಹೆಡ್‌ನಲ್ಲಿ ನೋಟ್‌ನ್ನು ಕಳುಹಿಸುತ್ತಾರೆ. ನೋಟ್ ಹಾಕಿ ಡೈರೆಕ್ಟ್ ಮಾಡಿರುವ ಬಗ್ಗೆ ಪತ್ರದ ವಾಕ್ಯಗಳನ್ನು ನಾನು ಇಲ್ಲಿ ಈಗ ಓದುತ್ತೇನೆ ಮಾನ್ಯ ಅಧ್ಯಕ್ಷರೇ, ಎಲ್ಲಾದರೂ ಈ ರೀತಿಯಲ್ಲಿ ಇತಿಹಾಸದಲ್ಲಿ ನೋಡಿದ್ದೀರೋ ಎಂಬ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕಾಗುತ್ತದೆ.

No. REF/HFL/400/Aug 93
Dated 11-10-1993

CRAWFORD HALL,
UNIVERSITY OF MYSORE.
MYSORE

NOTE

The case of malpractice against Kum.Neeta Muthappa, III year B.E Arch student from Malnad College of Engineering, Hassan, with Register No. 4558 is treated as closed, since the candidate has given satisfactory explanation vide her statement dtd. 11-10-1995.

Accordingly, you are hereby directed to arrange to announce the results of the candidate.

Sd/
Register (Evaluation)

ಇದನ್ನು ಬರೆದಿರುವುದು ಮೈಸೂರು ವಿಶ್ವವಿದ್ಯಾಲಯದ ಲೆಟರ್ ಹೆಡ್‌ನಲ್ಲಿ. ಇಂಥದ್ದನ್ನು ಎಲ್ಲಾದರೂ ನೀವು ಜಗತ್ತಿನಲ್ಲಿ ನೋಡಿದ್ದೀರಾ? ಇಂಥ ಮನುಷ್ಯನನ್ನು ನಾವು ಇನ್ನೂ ಉಪ ಕುಲಪತಿಗಳಾಗಿ ಇಟ್ಟುಕೊಂಡಿದ್ದೇವೆ ಎಂದರೆ ನಾವೆಲ್ಲರೂ ನಾಚಿಕೆಯಿಂದ ತಲೆ ತಗ್ಗಿಸಬೇಕಾಗುತ್ತದೆ. ಇವರು ಉಪ ಕುಲಪತಿಗಳೇ ಅಥವಾ ಬೇರೆ ಎನಾದರೂ ಆಗಿದ್ದಾರಾ ಎಂಬ ಬಗ್ಗೆ ಹೇಳಬೇಕಾಗುತ್ತದೆ. ಇದು ಈಗ ನಡೆದಿರುವುದಲ್ಲ, ಇದು ನಡೆದಿರುವುದು 1993ರಲ್ಲಿ. ಇಷ್ಟು ವರ್ಷಗಳಿಂದ ಅವ್ಯಾ-ಹತವಾಗಿ ನಡೆಯುತ್ತಿರುವ ಈ ಭ್ರಷ್ಟಾಚಾರ, ಈ ಅಧಿಕಾರ ದುರುಪಯೋಗ, ಇದನ್ನೆಲ್ಲಾ ಸಹಿಸಿಕೊಂಡು ಅದೊಂದು ವಿಶ್ವವಿದ್ಯಾಲಯವೆಂದು ನಾವು ಹೇಗೆ ಕರೆಯುವುದಕ್ಕೆ ಸಾಧ್ಯಾವಿದೆಯೇ, ಅನಂತರಾಮ್ ಎನ್ನುವವರೋ ಏನೋ ಇಲ್ಲಿದ್ದಾರೆ, ಹೆಸರು ಮರೆತು ಬಿಟ್ಟಿದ್ದೇನೆ, 3 ಫ್ಯಾಕಲ್ಟೀಸ್‌ಗೆ ಅವರನ್ನೇ ಡೈರಕ್ಟರ್ ಮಾಡಿದ್ದಾರೆ. ಅಂದರೆ ಮಾದಯ್ಯನವರ ಒಬ್ಬ ಚೇಲಾಗೆ ಮೂರು ಫ್ಯಾಕಲ್ಟೀಸ್‌ಗೆ ಅವರೊಬ್ಬರನ್ನೇ ಡೈರೆಕ್ಟರ್ ಮಾಡಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಅರ್ಹತೆ ಇರುವ ಬೇರೆ ಯಾರೂ ಅವರಿಗೆ ಸಿಗಲಿಲ್ಲವೇ? ಇಂಥ ಒಬ್ಬ ಭ್ರಷ್ಟನನ್ನು ನಾವು ಉಪ ಕುಲಪತಿಯನ್ನಾಗಿ ಇಟ್ಟುಕೊಂಡಿದ್ದೇವೆ ಎಂದರೆ ನಾವು ಎಷ್ಟು ನಾಚಿಕೆಯಿಂದ ತಲೆಯನ್ನು ತಗ್ಗಿಸಬೇಕಗಿದೆ ನೀವೇ ನೋಡಿಕೊಳ್ಳಿ. ನನ್ನ ಹತ್ತಿರ ಇನ್ನೂ ಹಲವಾರು ದಾಖಲೆಗಳಿವೆ. ಆದರೆ ನಾನು ಇಷ್ಟೇ ಸರ್ಕಾರದವರನ್ನು ಕೇಳುವುದು, ಇದರ ಬಗ್ಗೆ ಪ್ರಾಮಾಣಿಕವಾಗಿ ತನಿಖೆಯಾಗಬೇಕು, ಮೈಸೂರು ವಿಶ್ವವಿದ್ಯಾಲಯದ ಘನತೆ ಗೌರವವನ್ನು ಎತ್ತಿ ಹಿಡಿಯಬೇಕು ಎನ್ನುವ ಪ್ರಾಮಾಣಿಕ ಕಾಳಜಿ ಕನಿಷ್ಟವಾಗಿ ನಮ್ಮಲ್ಲಿ ಇದ್ದಿದ್ದೇ ಆದರೆ ತಕ್ಷಣ ಆತನನ್ನು ಸಸ್ಪೆಂಡ್ ಮಾಡಿ ತನಿಖೆಯನ್ನು ಸರ್ಕಾರದವರು ಮಾಡಿಸಬೇಕು. ಇದಕ್ಕಿಂತ ಬೇರೆ ಏನೂ ಸಾಧ್ಯ-ವಿಲ್ಲ, ಇದನ್ನು ಮಾಡಲೇಬೇಕು ಎಂದು ಹೇಳಿ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

+ ಶ್ರೀ ಸಿ.ಎಸ್. ಪುಟ್ಟೇಗೌಡ (ಚೆನ್ನರಾಯಪಟ್ಟಣ):- ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ. ಈ ಬಗ್ಗೆ ನಾನೂ ಕೂಡ ಈ ಹಿಂದೆ ಸದನದಲ್ಲಿ ಸಾಕಷ್ಟು ನನ್ನ ಅಭಿಪ್ರಾಯಗಳನ್ನು ಹೇಳಿದ್ದೆ. ಈ ಒಂದು ಸಂದರ್ಭದಲ್ಲಿ ಸರ್ಕಾರದವರಿಗೆ ನಾನು ಮೊದಲು ಅಭಿನಂದಿಸಬೇಕಾಗಿದೆ, ಏಕೆಂದರೆ ಎಂದೂ ಇಲ್ಲದಂಥ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಈ ರಾಜ್ಯದಲ್ಲಿ ಯಾರು ವಿದ್ಯೆಯಿಂದ ವಂಚಿತರಾಗಿದ್ದಾರೆ ಅವರ ವಿದ್ಯಾರ್ಜನೆಗಾಗಿ ಒಂದು ಮುಕ್ತ ವಿಶ್ವ ವಿದ್ಯಾಲಯವನ್ನು ಕೊಟ್ಟಂಥ ಈ ಸರ್ಕಾರವನ್ನು ಮತ್ತು ಸರ್ಕಾರದ ಮುಖ್ಯಮಂತ್ರಿಯನ್ನು ಮತ್ತು ಆ ಜಿಲ್ಲೆಯವರೇ ಆದಂಥ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಮತ್ತು ಶಿಕ್ಷಣ ಮಂತ್ರಿಗಳಾಗಿರುವ ಸೋಮಶೇಖರ್‌ಗೆ ಮತ್ತು ಸರ್ಕಾರಕ್ಕೆ ನಾನು ಮೊಟ್ಟ ಮೊದಲನೆಯದಾಗಿ ಅಭಿನಂದಿಸುತ್ತಾ ಇಂಥ ಒಂದು ಮುಕ್ತ ವಿಶ್ವವಿದ್ಯಾಲಯವನ್ನು ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿಯವರೇ ಆದಂಥ ಬಹುಶಃ ಅಂಜನಾಮೂರ್ತಿ ಎನ್ನತಕ್ಕಂಥವರನ್ನು ಉಪ ಕುಲಪತಿಗಳನ್ನಾಗಿ ಮಾಡಿ ಬಹುಶಃ ಸರ್ಕಾರ ಈಗಾಗಲೇ ಒಂದು ಸುತ್ತೋಲೆಯನ್ನು ಕೊಟ್ಟಿದೆ. 55 ಎಕರೆ ಜಮೀನಿನೊಂದಿಗೆ ಹಲವಾರು ಸವಲತ್ತುಗಳನ್ನು ಕೊಟ್ಟಿದೆ. ಇವೂತ್ತಿಗೂ ಕೂಡ ಆ 55 ಎಕರೆ ಸ್ಥಳದಲ್ಲಿ ಮುಕ್ತವಾಗಿ ತಿರುಗಾಡುವಂಥ ಮುಕ್ತವಾದಂಥ ವಾತಾವರಣ ಆ ವಿಶ್ವವಿದ್ಯಾಲಯದಲ್ಲಿ ಇಲ್ಲ. ಇದಕ್ಕೆ ಕಾರಣಕರ್ತರು ಅಲ್ಲಿ ಇರುವ ಉಪಕುಲಪತಿಗಳಾದ ಮಾದಯ್ಯನವರು ಮೊನಾರ್ಕಿಸಂ ಮಾಡುತ್ತಿದ್ದಾರೆ. ಇದು ನಮ್ಮ ತೋಟ, ಇದು ನಮ್ಮ ಗದ್ದೆ, ಇದು ನನ್ನ ಹೊಲ ಎನ್ನುವ ರೀತಿಯಲ್ಲಿ ಟ್ರೀಟ್ ಮಾಡುತ್ತಿದ್ದಾರೆ. ಅಲ್ಲಿಯವರೇ ಆದಂಥ 5 ಜನರು ನಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ. ದಯ ಮಾಡಿ ನೀವು ಯಾರೇ ಹೋಗಿ ಅಲ್ಲಿ ನೋಡಿ, ಮುಕ್ತ ವಿಶ್ವವಿದ್ಯಾಲಯದಲ್ಲಿ ಮುಕ್ತವಾಗಿ ತಿರುಗಾಡುವುದಕ್ಕೂ ಕೂಡ ದಾರಿ ಇಲ್ಲವಾಗಿದೆ. ಅದಕ್ಕೆ ಗೋಡೆಯನ್ನು ಮಾದಯ್ಯನವರು ಹಾಕಿಸಿದ್ದಾರೆ. ಇದು ನಾಚಿಕೆಗೇಡಿನ ವಿಷಯವಾಗಿದೆ. ಈ ರಾಜ್ಯದಲ್ಲಿ ನೆಲ, ಜಲ ಎಷ್ಟು ಮುಖ್ಯವೋ ಅದಕ್ಕಾಗಿ ಈ ಶಾಸನ ಸಭೆಯಲ್ಲಿ ಬಹು ಮುಖ್ಯವಾಗಿ ಚರ್ಚೆಯಾಗುತ್ತದೋ ಅದೇ ರೀತಿ ಬಹುಶಃ ಒಂದು ವಿಶ್ವವಿದ್ಯಾಲಯ ರಾಜ್ಯದಲ್ಲಿ ಕೆಡುತ್ತದೆ ಎಂದರೆ ನಾವೆಲ್ಲರೂ ಕೂಡ ತಲೆ ತಗ್ಗಿಸ ಬೇಕಾಗಿರುವುದಲ್ಲದೇ ನಮ್ಮ ಮುಂದಿನ ಪೀಳಿಗೆಗೆ ಈ ಸರ್ಕಾರ ಶಾಪ ಕೊಟ್ಟಂತೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ಬಹುಶಃ ಒಂದು ದಿನ ನೀರು ಹೋದರೆ ಮತ್ತೆ ಮಳೆ ಬಂದು ನೀರು ಬರಬಹುದು, ಆದರೆ ಒಂದು ವಿಶ್ವವಿದ್ಯಾಲಯ ಕೆಟ್ಟರೆ ಬಹುಶಃ ಈ ರಾಜ್ಯದ ಕನಸನ್ನು ಕಾಣತಕ್ಕಂಥ ಮತ್ತು ಮುಂದಿನ ನಾಗರೀಕರಾಗತಕ್ಕಂಥ ಭಾವಿ ಪ್ರಜೆಗಳಿಗೆ ನಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನಾನು ಒಂದು ಉದಾಹರಣೆಯನ್ನು ಕೂಡ ಕೊಡಬಯಸುತ್ತೇನೆ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಅಲ್ಲಿ ಒಂದು ಕ್ರಿಕೆಟ್ ಸ್ಟೇಡಿಯಂನನ್ನು ಮಾಡುತ್ತಿದ್ದಾರೆ. ಆದರೆ ಅಲ್ಲಿ ಅದನ್ನು ಕ್ರಿಕೆಟ್ ಸ್ಟೇಡಿಯಂ ಮಾಡಲಿಕ್ಕೆ ನಿಜವಾಗಿಯೂ ಅವರು ಹೋಗುತ್ತಿಲ್ಲ, ರೈಲ್ವೆ ಕಂಟ್ರಾಕ್ಟರ್ ಒಬ್ಬನಿಗೆ ಮಣ್ಣನ್ನು ಈ ವಿಶ್ವವಿದ್ಯಾಲಯದಿಂದ ಮಾರಿದರು, ಬಹುಶಃ ಆ ಕಂಟ್ರಾಕ್ಟರ್ ಬೇರೆ ಕಡೆಯಿಂದ ಸುಮಾರು 10-15 ಕಿ.ಮೀ. ದೂರದಿಂದ

ಮಣ್ಣನ್ನು ತರಬೇಕಾಗಿತ್ತು. ಆದರೆ ಈತನಿಗೆ ಇವರು ಕೆಟ್ಟ ನಡವಳಿಕೆಯಿಂದ ಬಹುಶಃ ಹತ್ತಿರದಲ್ಲೇ ಮಣ್ಣನ್ನು ಕೊಟ್ಟರು. ಅವರ ಮೇಲೆ ಸಿಂಡಿಕೇಟ್‌ನಲ್ಲಿ ಗಲಾಟೆಯಾದ ಮೇಲೆ ಅದನ್ನು ಮುಚ್ಚಿ ಕೊಳ್ಳುವುದಕ್ಕಾಗಿ ಅದನ್ನು ಕ್ರೀಡಾಂಗಣ ಮಾಡುತ್ತೇವೆ ಎಂದು ಹೇಳಿದರು. ಮೈಸೂರು ವಿಶ್ವ ವಿದ್ಯಾಲಯದ ಸುತ್ತಮುತ್ತಲಿರುವ ಮಾನಸ ಗಂಗೋತ್ರಿಯಲ್ಲಿ ಮಹಾನ್ ಕವಿ ಕುವೆಂಪುರಂಥವರು ಜನ್ಮ ಕೊಟ್ಟಿದ್ದು, ಶ್ರೀ ಮಾಲಿರವರು ಇದ್ದಂಥ ಒಂದು ವಿಶ್ವವಿದ್ಯಾಲಯ ಬಹುಶಃ ಈ ಸದನದಲ್ಲಿ ನಮ್ಮ ಮುಖ್ಯಮಂತ್ರಿಗಳ ಸಮೇತ ಬಹುಶಃ ನಂಜೇಗೌಡರು ಮತ್ತು ಜೆ. ಹೆಚ್. ಪಟೇಲರು ಮತ್ತು ಬಹಳ ಜನರು ವಿದ್ಯೆಯನ್ನು ಕಲಿತವರು ಇದ್ದಾರೆ.

6.10 ಪಿ.ಎಂ.

ಈ ಸೌಧವನ್ನು ಕಟ್ಟಿದಂತಹ ಮಾನ್ಯ ಹನುಮಂತಯ್ಯನವರು ಕೂಡ ಆ ವಿಶ್ವವಿದ್ಯಾನಿಲಯದಲ್ಲಿ ಓದಿದವರು. ರಾಧಾಕೃಷ್ಣರಂತಹ ಒಬ್ಬ ರಾಷ್ಟ್ರದ ಎತ್ತರದ ವ್ಯಕ್ತಿ ಕಲಿತಂಥ ವಿಶ್ವವಿದ್ಯಾನಿಲಯದಲ್ಲಿ ಒಂದಲ್ಲ, ಎರಡಲ್ಲ, ನೂರಾರು ಹಗರಣಗಳ ಸರಮಾಲೆ ಇದೆ. ತಮಗೆ ಬೇಕಾದಂಥ ಒಬ್ಬ ಹೆಣ್ಣುಮಗಳನ್ನು ಒಬ್ಬ ಸಾಮಾನ್ಯ ಲೆಕ್ಚರರ್‌ನ್ನು ಆ ಒಂದು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಮಾಡುತ್ತಾರೆ, ಹಾಗೂ ತಮಗೆ ಬೇಕಿಲ್ಲದೆ ಇರುವಂತಹ 15 ವರ್ಷಗಳ ಕಾಲ ಅಲ್ಲಿ ಸೇವೆ ಮಾಡಿದಂತಹವರಿಗೆ ಅಲ್ಲಿ ಇವತ್ತು ಸಿಗಬೇಕಾದ ಸವಲತ್ತು ಸಿಗುತ್ತಿಲ್ಲ. ದಯಮಾಡಿ ಆ ಕಡೆ ಗಂಭೀರ ವಾದಂತಹ ಗಮನವನ್ನು ಹರಿಸಿ. ಅದು ವಿಶ್ವವಿದ್ಯಾನಿಲಯ ಆಗಿಲ್ಲ. ಇದನ್ನು ಇಡೀ ಮೈಸೂರು ನಗರ ಹೇಳುತ್ತದೆ. ಮೈಸೂರಿನ ಒಂದು ವಿಶೇಷ ಎಂದರೆ ಮಹಾರಾಜರ ಅರಮನೆ, ಅಲ್ಲಿನ ಸಂಸ್ಕೃತಿ, ಆಡಳಿತ ವೈಖರಿ ಮುಂತಾದವುಗಳಿಂದಾಗಿ ವಿಶೇಷವಾದಂತಹ ಒಂದು ಗಮನ ಕೊಟ್ಟಿದ್ದು ಮೈಸೂರು ವಿಶ್ವ-ವಿದ್ಯಾನಿಲಯದಲ್ಲಿ ಒಬ್ಬ ವಿದ್ಯಾರ್ಥಿ ಓದುತ್ತಾನೆ ಎಂದರೆ ಆದಕ್ಕೆ ವಿಶೇಷವಾದಂತಹ ಸ್ಥಾನಮಾನ ಇತ್ತು. ಏಕೆಂದರೆ ನಾನೂ ಕೂಡ ಆ ವಿಶ್ವವಿದ್ಯಾನಿಲಯದಲ್ಲಿ ಕಲಿತವನು. ಆ ಒಂದು ವಿಶ್ವ-ವಿದ್ಯಾನಿಲಯದ ವ್ಯಾಪ್ತಿಯಲ್ಲಿ ಓಡಾಡಿ ಕಲಿತವನು. ಇವತ್ತು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಏನು 55 ಎಕರೆ ಕೊಟ್ಟಿದ್ದೀರಿ ಅಲ್ಲಿ ಎರಡು ಗೋಡೆಗಳು ಆಗಿವೆ. ನಾನು 15-20 ದಿವಸದ ಹಿಂದೆ ತಿರುಗಾಡಿಕೊಂಡು ಬರುತ್ತಿರುವಾಗ ನೋಡಿ ಏಕೆ ಈ ರೀತಿ ಮಾಡಿದ್ದಾರೆ, ನಾನು ಇಲ್ಲಿ ಹುಡುಗನಾಗಿದ್ದಾಗ ಮುಕ್ತವಾಗಿ ಓಡಾಡುತ್ತಿದ್ದೆ ಎಂದರೆ ಅವರ ಮುಖವನ್ನೇ ಯಾರೂ ನೋಡ ಬಾರದು, ಆ ಕಡೆ ತಿರುಗಬಾರದು ಎಂದು ಮಾಡಿದ್ದಾರೆ ಎಂಬುದು ಗೊತ್ತಾಯಿತು ಮತ್ತು ಅಡಳಿತ ವೈಖರಿ ಬಗ್ಗೆ ಹೇಳುವುದಾದರೆ ಇನ್ನೂ ಕೂಡ ಈ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಸ್ಥಿತಿಯಲ್ಲಿ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಸಂಬಳವನ್ನು ಸಾಲ ತೆಗೆದುಕೊಂಡ ಹಾಗೆ ಮೈಸೂರು ವಿಶ್ವವಿದ್ಯಾ-ನಿಲಯದಿಂದ ತೆಗೆದುಕೊಂಡು ಅವರು ಸಂಬಳ ಇವತ್ತು ನೌಕರರಿಗೆ ಕೊಡುತ್ತಿದ್ದಾರೆ. ಇದಕ್ಕೆ ವಿಶೇಷವಾದಂತಹ ಕಾಳಜಿಯನ್ನು ಸರ್ಕಾರ ವಹಿಸಬೇಕು. ನಮ್ಮ ಹಣಕಾಸು ಮಂತ್ರಿಯವರಾದ ಸಿದ್ದರಾಮಯ್ಯನವರೂ ಸಹ ಆ ಜಿಲ್ಲೆಯವರೇ. ಏನು ಒಂದು ದೊಡ್ಡ ಔದಾರ್ಯವನ್ನು ಇಟ್ಟುಕೊಂಡು ಈ ಸರ್ಕಾರ ಮುಕ್ತ ವಿಶ್ವವಿದ್ಯಾನಿಲಯ ಕೊಟ್ಟರೆ, ಅಲ್ಲಿ ಮುಕ್ತವಾಗಿ ಕಾರ್ಯ

ಚಟುವಟಿಕೆಯನ್ನು ಮಾಡುವುದಕ್ಕೆ ಒಬ್ಬ ಯೋಗ್ಯ ಉಪಕುಲಪತಿಯನ್ನು ಏನು ಮಾಡಿದ್ದೀರಿ ಅವರಿಗೆ ಏನು ಒಂದು ಸ್ಥಾನಮಾನ ಕಾರ್ಯವನ್ನು ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹುಶಃ ಪ್ರಪಂಚದಲ್ಲಿ ಆ ಒಂದು ವಿಶ್ವವಿದ್ಯಾನಿಲಯ ಅತ್ಯಂತ ಕೀರ್ತಿ ತರತಕ್ಕಂಥ ವಿಶ್ವವಿದ್ಯಾನಿಲಯ-ವಾಗುತ್ತದೆ. ಅದಕ್ಕೆ ಎಲ್ಲಾ ತರಹದ ಸ್ವಾಯತ್ತತೆ ಕೊಟ್ಟು, ಆರ್ಥಿಕ ಶಕ್ತಿಯನ್ನು ತುಂಬಿ, ಮತ್ತು ಆ ಒಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಮಾದಯ್ಯನವರಿಂದ ಏನು ತೊಂದರೆಯಾಗುತ್ತದೆ ಅದನ್ನು ತಪ್ಪಿಸಬೇಕು ಅದಕ್ಕೋಸ್ಕರ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅವರ ಕಾರ್ಯಚಟುವಟಿಕೆಗಳನ್ನು ಮುಕ್ತವಾಗಿ ನಿರ್ವಹಣೆ ಮಾಡುವುದಕ್ಕೆ ಅನುವು ಮಾಡಿಕೊಡಬೇಕು ಎನ್ನುವ ಮಾತನ್ನು ಹೇಳಿ ಅಲ್ಲಿ ಆಗತಕ್ಕಂಥ ಹಗರಣ ಏನಿದೆ ಅದು ಒಂದಲ್ಲ, ಎರಡಲ್ಲ ಅದು ನೂರಾರು ಪಟ್ಟಿ ಇದೆ. ಅದಕ್ಕೆ ಒಂದು ಸಮಗ್ರವಾದ ತನಿಖೆಯನ್ನು ಮಾಡಬೇಕು. ತನಿಖೆ ಕೂಡ ಈಗಾಗಲೇ ಸಾಕಷ್ಟಾಗಿದೆ. ಒಂದು ವೇಳೆ ಸರ್ಕಾರ ನೇರವಾಗಿ ವೈಸ್ ಚಾನ್ಸಲರ್‌ನ್ನು ವಜಾ ಮಾಡುವುದಕ್ಕೆ ಬರುವುದಿಲ್ಲ ಎಂದರೆ ಅದಕ್ಕೆ ಸಂಬಂಧಪಟ್ಟಂತಹ ಚಾನ್ಸಲರ್‌ಗೆ ಸರ್ಕಾರ ಶಿಫಾರಸ್ಸು ಮಾಡುವುದಾಗಲಿ ಅಥವಾ ರಜಾ ಹಾಕಿಸುವುದಾಗಲಿ ಅದಕ್ಕೆ ಮುಕ್ತವಾದ ವಾತವರಣವನ್ನು ಕಲ್ಪಿಸಿಕೊಡಬೇಕು ಎನ್ನುವ ಮಾತನ್ನು ಹೇಳಿ ನನಗೆ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ಸರ್ಕಾರ ಇದರ ಬಗ್ಗೆ ಗಂಭೀರವಾದಂತಹ ಗಮನವನ್ನು ಹರಿಸಬೇಕು, ಈ ವಿಶ್ವವಿದ್ಯಾನಿಲಯಕ್ಕೆ ಶಕ್ತಿ ತುಂಬಬೇಕು ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡಲಿ.

ಶ್ರೀ ಎ. ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧ-ಪಟ್ಟಿರುವುದರಿಂದ ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು:- ಈಗ ಯಾರು ಸಹಿ ಮಾಡಿದ್ದಾರೆ ಅವರು ಮಾತನಾಡಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಡಲಿ, ನಂತರ ಕ್ಲ್ಯಾರಿಫಿಕೇಷನ್ ಕೇಳಿ. ಈಗ ತಾವು ಮಾತನಾಡುವುದು ಬೇಡ. ಉತ್ತರ ಕೊಡಲಿ, ತಮಗೆ ಏನಾದರೂ ಅನುಮಾನ ಇದ್ದರೆ ಕೇಳಿ.

ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುವುದಕ್ಕಿಂತ ಮೊದಲು ಒಂದೇ ಒಂದು ವಿಚಾರವನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಸುಮಾರು ದಶಕಗಳ ಕಾಲದಿಂದ ವಿಧಾನಸಭೆಯಲ್ಲಿ ನಡೆಯುತ್ತಿಲ್ಲ ಅಂತಹ ರಾಜಕೀಯ ಒಂದು ದೊಡ್ಡ ಕೂಟ ಮೈಸೂರು ವಿಶ್ವವಿದ್ಯಾನಿಲಯವಾಗಿದೆ ಯಾವುದೇ ಒಂದು ಪ್ರಗತಿಪರವಾದಂತಹ ಕಾರ್ಯವನ್ನು ತೆಗೆದುಕೊಳ್ಳಬೇಕಾದರೂ ಕೂಡ ಒಂದು ದೊಡ್ಡ ಒಡಕು, ಯಾವುದೇ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಹೋದರೂ ಕೂಡ ಅದಕ್ಕೆ ಒಡಕು. ಈ ರೀತಿ ನಾಲ್ಕು ಉಪಕುಲಪತಿಗಳು

ವಿಶ್ವವಿದ್ಯಾನಿಲಯಕ್ಕೆ ಬಂದಾಗಿನಿಂದಲೂ ಕೂಡ ಪತ್ರಿಕೆಗಳಲ್ಲಿ ರಾರಾಜಿಸುವಂತಹ ಒಂದು ಪರಿಸ್ಥಿತಿ ಬಂದಿದೆ. ಈಗಾಗಲೇ ಅಲ್ಲಿ ಎರಡು ತನಿಖೆಗಳನ್ನು ಮಾಡಿದರು ಎಂದು ಹೇಳಿದರು. ಆ ತನಿಖೆಯ ವರದಿ ಇವತ್ತು ಸರ್ಕಾರದ ಮುಂದೆ ಇದೆ. ಆ ಒಂದು ವಿಶ್ವವಿದ್ಯಾನಿಲಯ ಸಂಬಂಧಪಟ್ಟಂಥ ಒಂದು ಕ್ರೀಡಾಂಗಣ ಮಾಡುವಂತಹ ಸಮಯದಲ್ಲಿ ಅದರ ಬಗ್ಗೆ ಈಗಾಗಲೇ ತನಿಖೆಯಾಗಿದೆ. ಅದರ ಬಗ್ಗೆ ರೈಲ್ವೇಯವರು ಸ್ಟೇಡಿಯಂ ಮಾಡಿಕೊಡುವುದಕೋಸ್ಕರವಾಗಿ ಆಗಿತ್ತು ಎನ್ನುವುದು ಕೂಡ ವರದಿ ಬಂದಿದೆ. ಈ ದೃಷ್ಟಿಯಲ್ಲಿ ಯಾವುದೇ ಒಂದು ವಿಚಾರವನ್ನು ಮಾಡುವಾಗಲೂ ಕೂಡ ಈ ಒಂದು ವಿಶ್ವವಿದ್ಯಾನಿಲಯದ ವಿದ್ಯಾ ಇಲಾಖೆಯಲ್ಲಿ ರಾಜಕೀಯದ ಪ್ರವೇಶ ಏನಿದೆ ಅದು ತಪ್ಪಬೇಕಾದ ಅವಶ್ಯಕತೆ ಇದೆ. ಇಲ್ಲದಿದ್ದರೆ ಮೈಸೂರು ವಿಶ್ವವಿದ್ಯಾನಿಲಯ ತನ್ನ ಘನತೆಯನ್ನು ಹಾಳು ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶ್ರೀರಾಮ ರೆಡ್ಡಿಯವರು ಹೇಳಿರತಕ್ಕಂಥ ಎಲ್ಲಾ ಮಾಹಿತಿ ನನ್ನ ಹತ್ತಿರ ಇದೆ. ಮಾನ್ಯ ಮಾದಯ್ಯನವರು ಉಪಕುಲಪತಿಗಳಾಗಿದ್ದಾಗ ಒಂದು ಹೊಸ ವ್ಯವಸ್ಥೆ ಸೃಷ್ಟಿಯಾಗುತ್ತದೆ ಎಂದು ಎಲ್ಲರ ಆಸೆ ಇತ್ತು. ನಾನು ಅಲ್ಲಿ 2-3 ಸಲ ಪ್ರವೇಶ ಮಾಡಿದ್ದೆ. ಒಂದು ಸಲ ಗಾಂಧಿ ಭವನದಲ್ಲಿ ಯಾವುದೋ ಒಂದು ವಿಚಾರ ಸಂಕೀರ್ಣಕ್ಕೆ ಕರೆದಿದ್ದರು. ನಾನೂ ಹೋಗಿದ್ದೆ. ಆ ವಾತಾವರಣವನ್ನು ನೋಡಿದೆ ಒಂದು ವಿಶ್ವವಿದ್ಯಾನಿಲಯ ಈ ರೀತಿ ಗುಂಪುಗಾರಿಕೆಯಲ್ಲಿ ಇರಬಾರದು ಎಂದು ಹೇಳಿ ಮಾದಯ್ಯನವರಿಗೆ ನಾನು ಹೇಳಿಕಳುಹಿಸಿದೆ. ಆ ರೀತಿ ಗುಂಪುಗಾರಿಕೆ ಬೆಳೆಯಬಾರದು ಆಕಸ್ಮಾತ್ ಅವರು ತಪ್ಪು ಮಾಡಿರಬಹುದು ಅಥವ ಸರಿ ಮಾಡಿರಬಹುದು. ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಈ ರೀತಿಯ ವಾತಾವರಣ ಸೃಷ್ಟಿಯಾದರೆ ಅದನ್ನು ನೋಡಿಕೊಳ್ಳಬೇಕಾದ್ದು ನಿಮ್ಮ ಜವಾಬ್ದಾರಿ ಎಂದು ಹೇಳಿ ಅವರಿಗೆ ಹೇಳಿಕಳುಹಿಸಿದೆ. ಕನಿಷ್ಟ ಒಂದು ಸೌಜನ್ಯಕಾದರೂ ಈ ರೀತಿ ವಾತಾವರಣ ಸೃಷ್ಟಿಯಾಗಿದೆ, ಚರ್ಚೆ ಮಾಡಿ ಒಂದು ಸಮಾಧಾನಕರವಾದ ವಾತಾವರಣವನ್ನು ಸೃಷ್ಟಿ ಮಾಡುತ್ತೇನೆ ಎಂದು ಹೇಳಿ ಕಳುಹಿಸಲಿಲ್ಲ. ನಮಗೆ ಯಾವುದೇ ಒಂದು ಗುಂಪುಗಾರಿಕೆ ಬೇಕಾಗಿಲ್ಲ. ನಮಗೆ ಬೇಕಾಗಿರುವುದು ವಿಶ್ವವಿದ್ಯಾನಿಲಯ ಉತ್ತಮವಾದಂತಹ ವಾತಾವರಣದಲ್ಲಿ ಹೋಗಬೇಕು. ಸುಮಾರು ಕಾರ್ಯ-ಕ್ರಮಗಳು, ವಿಚಾರಗಳು, ಘರ್ಷಣೆಗಳು ಗುಂಪುಗಾರಿಕೆಗಳು ಅಲ್ಲಿ ನಡೆಯುತ್ತಿವೆ. ಮಾನ್ಯ ಶ್ರೀರಾಮ ರೆಡ್ಡಿಯವರು ಏನು ಹೇಳಿದರು ಅದರ ಬಗ್ಗೆ ದಯವಿಟ್ಟು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈಗಾಗಲೇ ಏನು ತನಿಖೆಯಾಗಿದೆ ಆ ತನಿಖೆಯ ವರದಿ ಎಷ್ಟು ಸತ್ಯ, ಅಸತ್ಯ ಎನ್ನುವುದನ್ನು ಪರಿಶೀಲನೆ ಮಾಡಿ ಅತ್ಯಂತ ಗಂಭೀರವಾಗಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ನಿರ್ಲಕ್ಷ ಮಾಡಬಾರದು ಎಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮಗೆ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ಬಹಳ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಮತ್ತು ಆ ವಿಶ್ವವಿದ್ಯಾನಿಲಯ ಬಹಳ ಹೆಸರುವಾಸಿಯಾದಂತಹ ವಿಶ್ವವಿದ್ಯಾನಿಲಯ. ಮತ್ತು ಇದರ ಪರಂಪರೆಯನ್ನು ಉಳಿಸಬೇಕು ಎನ್ನುವ ವಿಚಾರಗಳನ್ನು ಹೇಳಿದ್ದಾರೆ. ನಾನೂ ಒಪ್ಪುತ್ತೇನೆ. ಈ ವಿಶ್ವವಿದ್ಯಾನಿಲಯ ನಮ್ಮ ದೇಶದಲ್ಲಿ ಬಹಳ ಹೆಸರುವಾಸಿಯಾಗಿರತಕ್ಕಂಥ ವಿಶ್ವವಿದ್ಯಾನಿಲಯ. ಅನೇಕ ದೊಡ್ಡ ದೊಡ್ಡ ವ್ಯಕ್ತಿಗಳು ಈ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಬಂದಿದ್ದಾರೆ. ನಾನೂ ಸಹ ಅದೇ ವಿಶ್ವವಿದ್ಯಾನಿಲಯದಿಂದ ಬಂದಂತಹ ಅಭ್ಯರ್ಥಿ. ಅದರ ಒಂದು ಹಿರಿಮೆಯನ್ನು, ಘನತೆ ಗೌರವವನ್ನು ಕಾಪಾಡಿಕೊಂಡು ಹೋಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಡಾ।। ಮಾದಯ್ಯನವರ ಅವಧಿಯಲ್ಲಿ ಅನ್ಯಾಯಗಳಾಗಿವೆ, ಅಚಾತುರ್ಯಗಳಾಗಿವೆ, ಇದರ ಬಗ್ಗೆ ದೂರುಗಳು ಬಂದಿವೆ ಎನ್ನುವುದನ್ನು ಹೇಳಿದ್ದಾರೆ. ಈಗಾಗಲೇ ಕೆಲವು ಸಿಂಡಿಕೇಟ್ ಮೆಂಬರುಗಳೂ ಸಹ ಅವರ ಬಗ್ಗೆ ಆಪಾದನೆ ಮಾಡಿದ್ದಾರೆ. ಮತ್ತು ಮಾನ್ಯ ಸದಸ್ಯರುಗಳು ಏನು ಹೇಳಿದ್ದಾರೆ ಅದನ್ನು ನೇರವಾಗಿ ಚಾನ್ಸಲರ್‌ಗೆ ಕೊಟ್ಟಿದ್ದಾರೆ. ಈ ಉಪಕುಲಪತಿಗಳ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಬರುವುದಿಲ್ಲ. ಅದು ಒಂದು ಕಾನ್ಸ್ ಟಿಟ್ಯೂಷನ್ ಅಥಾರಿಟಿ. ನಮ್ಮ ಸರ್ಕಾರ ಏನಾದರೂ ಇದ್ದರೆ ಅದನ್ನು ವಿಚಾರಣೆ ಮಾಡಿ ಚಾನ್ಸಲರ್‌ಗೆ ಬರೆಯಬಹುದು. ಈಗಾಗಲೇ ಚಾನ್ಸಲರ್ ಎರಡು ಕಮಿಟಿಗಳನ್ನು ರಚನೆ ಮಾಡಿದ್ದಾರೆ ಎಂದು ಕೇಳಿದ್ದೇನೆ. ಒಂದು ಕೆ.ಕೆ. ಮಿಶ್ರಾರವರ ಕಮಿಟಿ, ಇನ್ನೊಂದು ಜೆ.ಪಿ. ಶರ್ಮಾ ನಮ್ಮ ಪ್ರಿನ್ಸಿಪಲ್ ಸೆಕ್ರೆಟರಿಯವರ ಒಂದು ಅಧ್ಯಕ್ಷತೆಯಲ್ಲಿ ಮಾಡಿದ್ದಾರೆ. ಅವರು ಈಗಾಗಲೇ ವಿಚಾರಣೆ ನಡೆಸಿದ್ದಾರೆ. ಆದರ ವರದಿ ಇನ್ನು ಇನ್ನು ನಮಗೆ ಬಂದಿಲ್ಲ. ಆ ವರದಿಯನ್ನು ತರಿಸಿಕೊಂಡು ನೋಡುತ್ತೇನೆ. ನಾನು ಬಂದಮೇಲೆ ಈ ವಿಚಾರವನ್ನು ಈಗ ಎತ್ತಿದ್ದಾರೆ. ವರದಿ ತರಿಸಿಕೊಂಡು ಏನು ವರದಿ ಮಾಡಿದ್ದಾರೆ, ಏನು ಗುರುತರವಾದ ಆಪಾದನೆಗಳು ಇದೆ, ಅವರ ಅಭಿಪ್ರಾಯಗಳು ಏನಿದೆ ಅದನ್ನು ತಿಳಿದುಕೊಂಡು ಯಾವ ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ನಾವ್ಯಾರೂ ಹಿಂಜರಿಯುವುದಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಶ್ರೀಮಾನ್ ಪುಟ್ಟೇಗೌಡರ ಒಂದು ವಿಚಾರವನ್ನು ಎತ್ತಿದ್ದಾರೆ. ಏನೆಂದರೆ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿ ಆ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿ ಆ ವಿಶ್ವವಿದ್ಯಾನಿಲಯಕ್ಕೆ ಸರಿಯಾದಂಥ ಸಹಕಾರವನ್ನು ಕೊಡುತ್ತಾ ಇಲ್ಲ ಎನ್ನುವುದನ್ನೂ ಸಹ ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ಈಗಾಗಲೇ ಇಬ್ಬರು ಉಪಕುಲಪತಿಗಳನ್ನು ಕರೆದು ಸಭೆ ಮಾಡಿದ್ದೇವೆ. ಮೈಸೂರು ವಿಶ್ವವಿದ್ಯಾನಿಲಯದವರು ಮತ್ತು ಹೊಸದಾಗಿ ನೇಮಕ ಆಗಿರತಕ್ಕ ಕುಲಪತಿಗಳು ಇಬ್ಬರನ್ನೂ ಕರೆಯಿಸಿ ಚರ್ಚೆ ಮಾಡಿದ್ದೇವೆ. ಅವರಿಬ್ಬರಲ್ಲಿ ಕೆಲವೊಂದು ತಿಳುವಳಿಕೆಯಲ್ಲಿ ತಪ್ಪು ಗ್ರಹಿಕೆ ಆಗಿದೆ. ಆದ್ದರಿಂದ ನಾನು ಅವರಿಗೆ ಹೇಳಿದ್ದೇನೆ, ನಮ್ಮ ಪ್ರಿನ್ಸಿಪಾಲ್ ಸೆಕ್ರೆಟರಿಯವರನ್ನು ಸ್ಥಳಕ್ಕೆ ಕಳುಹಿಸಿ ಏನು ಕಾಂಪೌಂಡ್ ಹಾಕಿರತಕ್ಕಂಥ ವಿಚಾರ ಇರಬಹುದು ಮತ್ತು ಬೇರೆ ಬೇರೆ ಆಡಳಿತಾತ್ಮಕವಾದ ವಿಚಾರಗಳು

ಇರಬಹುದು, ಇವೆಲ್ಲದರ ಬಗ್ಗೆ ಸಮಗ್ರವಾದಂಥ ತನಿಖೆಯನ್ನು ನಡೆಸಿ ನೀವೇ ಅಲ್ಲಿ ಇತ್ಯರ್ಥ ಮಾಡಿ ಬರಬೇಕು, ಅಲ್ಲಿ ಆಗಲಿಲ್ಲ ಎಂದರೆ ಸರ್ಕಾರದ ಮಟ್ಟಕ್ಕೆ ಒಂದು ವರದಿಯನ್ನು ತಂದು ನೀಡ-ಬೇಕೆಂದು ಹೇಳಿದ್ದೇನೆ, ಒಂದು ವಾರದೊಳಗೆಯೇ ಈ ಒಂದು ಕೆಲಸವನ್ನು ಮಾಡಬೇಕೆಂದು ನಾನು ಅವರಿಗೆ ಸೂಚನೆಯನ್ನು ಕೊಡುತ್ತಿದ್ದೇನೆ, ಆ ಕೆಲಸವನ್ನು ಅವರು ಮಾಡುತ್ತಾರೆ. ಮತ್ತೆ ನಮ್ಮ ಮಾದಯ್ಯನವರ ಬಗ್ಗೆ ಗುರುತರವಾದ ಆಪಾದನೆಗಳು ಏನು ಇದೆ ಇದರ ಬಗ್ಗೆ ಮಾನ್ಯ ಸದಸ್ಯರು ನಮ್ಮ ಸರ್ಕಾರ ಬಹಳ ವಿಳಂಬ ಮಾಡುತ್ತಿದೆ ಎಂದು ಹೇಳುವುದನ್ನು ಬಿಡಬೇಕು. ನಮ್ಮ ಅವಧಿಯಲ್ಲಿ ಯಾವುದೇ ರೀತಿಯಾದಂಥ ರಕ್ಷಣೆ ಕೊಡುವುದಾಗಲಿ, ಮುಚ್ಚಿಡತಕ್ಕಂಥದ್ದೆ ಆಗಲೀ ಯಾವುದೇ ರೀತಿಯ ಕೆಲಸವನ್ನು ಮಾಡುವುದಿಲ್ಲ. ಅದರಲ್ಲಿ ನನ್ನದು ಯಾವುದು ವೈಯಕ್ತಿಕವಾದಂಥ ಪ್ರತಿಷ್ಠೆ ಇರುವುದಿಲ್ಲ, ನಮಗೂ ನಿಮ್ಮಷ್ಟೆ ಒಂದು ಕಳಕಳಿ ಇದೆ, ಆ ವಿಶ್ವವಿದ್ಯಾನಿಲಯದ ಘನತೆ, ಗೌರವ, ಒಂದು ಪರಂಪರೆ ಉಳಿಯಬೇಕು ಎನ್ನತಕ್ಕಂಥದ್ದರ ಬಗ್ಗೆ ಯಾವ ಒಂದು ಕ್ರಮವನ್ನು ತೆಗೆದು-ಕೊಳ್ಳಬೇಕೋ ಅದರ ಬಗ್ಗೆ ನಮ್ಮ ಕೆ.ಕೆ. ಮಿಶ್ರಾರವರು ಮತ್ತು ಜೆ.ಪಿ. ಶರ್ಮರವರು ವರದಿ ಮಾಡಿದ್ದರೆ ಆ ವರದಿಯನ್ನು ತರಿಸಿಕೊಳ್ಳುತ್ತೇನೆ. ಅವರು ಮಾಡದೇ ಇದ್ದರೆ ಇನ್ನೊಂದು ವಿಚಾರಣೆ-ಯನ್ನು ಅವರ ಕೈಯಲ್ಲೇ ನಡೆಸುತ್ತೇವೆ, ಹೇಗಿದ್ದರೂ ಕಾರ್ಯದರ್ಶಿಯವರನ್ನು ಮೈಸೂರಿಗೆ ಕಳುಹಿಸುತ್ತಿದ್ದೇನೆ. ಅದರಲ್ಲಿ ತಾವು ಎತ್ತಿರತಕ್ಕ ವಿಚಾರಗಳನ್ನೂ ಮತ್ತೆ ವಿಚಾರಣೆ ನಡೆಸಿ ವರದಿ ಕೊಡಿ ಎಂದು ಹೇಳುತ್ತೇನೆ. ಆದು ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬಹುದು ಅದನ್ನು ನಿರ್ದಾಕ್ಷಿಣ್ಯ-ವಾಗಿ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ತಮ್ಮ ಮುಖಾಂತರ ನಾನು ಅವರಿಗೆ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಉಪಾಧ್ಯಕ್ಷರೇ, ಕಳೆದವರ್ಷ ಇವರು ಹೇಳಿದರು ಮಾನ್ಯ ವಿದ್ಯಾಮಂತ್ರಿಗಳು, ನಮ್ಮ ಸರ್ಕಾರದಲ್ಲಿ ನಾವು ವಿಳಂಬ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯವನ್ನು ಬಿಡಬೇಕು ಎಂದು ಹೇಳಿ. ಕಳೆದವರ್ಷ ಇದೇ ವಿಷಯವನ್ನು ಅಂದರೆ ಇದೇ ಮೈಸೂರು ವಿಶ್ವವಿದ್ಯಾ-ಲಯಕ್ಕೆ ಸಂಬಂಧಪಟ್ಟಂಥ ವಿಷಯವನ್ನು ಈ ಸದನದಲ್ಲಿ ಚರ್ಚೆ ಮಾಡಿದಾಗ ಇದೇ ರೀತಿ ಉತ್ತರ ಬಂತು, ಅದು ಒಂದು ವರ್ಷ ಆಯಿತು. ವಿಳಂಬ ಮಾಡುತ್ತಿದ್ದೇವೆ ಎಂದು ನೀವು ಅಂದು ಕೊಳ್ಳಬೇಕಾಗಿಲ್ಲ ಎಂದು ಹೇಳಿದರೆ, ಇವರನ್ನು ನಾನು ಇನ್ನೇನು ಅಂದುಕೊಳ್ಳಬೇಕು? ಈ ವಿಷಯ-ವನ್ನು ಇದೇ ಸದನದಲ್ಲಿ ಪ್ರಸ್ತಾಪ ಮಾಡಿ ಒಂದು ವರ್ಷ ಆಗಿದೆ, ಪತ್ರಿಕೆಗಳಲ್ಲಿ ಬಂದಿದೆ, ವಿಶ್ವವಿದ್ಯಾ-ನಿಲಯದ ವಿಚಾರದಲ್ಲಿ ಏನೇನು ಚರ್ಚೆಯಾಗಿದೆ ಎಂಬುದನ್ನು ನೀವು ಪತ್ರಿಕೆಯಲ್ಲಿ ನೋಡಬಹುದು. ಒಂದು ವರ್ಷ ಆದರೂ ಸಹ ನಾವು ವಿಳಂಬ ಮಾಡಿಲ್ಲ, ನಾನು ಇನ್ನೂ ವರದಿಯನ್ನು ನೋಡಿಲ್ಲ, ಅದನ್ನು ತರಿಸಿಕೊಂಡು ನೋಡುತ್ತೇನೆ, ಪರಿಶೀಲನೆ ಮಾಡುತ್ತೇನೆ, ಈ ಉತ್ತರವನ್ನು ನಿಮ್ಮಿಂದ ಕೇಳುವುದಕ್ಕೆ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ ಇದು ಒಂದು. ಎರಡನೆಯದಾಗಿ, ಇವರು ಏನು ಹೇಳುತ್ತಿದ್ದಾರೆ ವಿಶ್ವವಿದ್ಯಾನಿಲಯಕ್ಕೆ ಅದರದೇ ಆದಂಥ

ಆಟಾನಮಸ್ ಪವರ್ ಇದೆ, ಸರ್ಕಾರ ನೇರವಾಗಿ ಅದರಲ್ಲಿ ಹಸ್ತಕ್ಷೇಪ ಮಾಡಲಿಕ್ಕೆ ಆಗುವುದಿಲ್ಲ ಎಂಬ ವಿಷಯ ಏನು ಹೇಳುತ್ತಿದ್ದಾರೆ, ಇದು ಜಾರಿಕೊಳ್ಳತಕ್ಕಂಥ ಪ್ರವೃತ್ತಿ. ಆದರೆ ವಿಶ್ವವಿದ್ಯಾನಿಲಯದ ಬಗ್ಗೆ ನಿಮಗೆ ಯಾವುದೇ ರೀತಿಯಾದಂಥ ಅಡಳಿತಾತ್ಮಕ ಕಾನೂನಿನ ಚೌಕಟ್ಟಿನಲ್ಲಿ ನಿಮಗೆ ಅಧಿಕಾರ ಇಲ್ಲದೇ ಇರಬೇಕಾದರೆ ನೀವು ವಿಶ್ವವಿದ್ಯಾನಿಲಯಕ್ಕೆ ಹಣ ಏಕೆ ಕೊಡುತ್ತೀರಿ? ಯಾವ ಕಾನೂನಿನಡಿಯಲ್ಲಿ ಹಣ ಕೊಡುತ್ತೀರಿ, ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನು ನೇಮಕ ಮಾಡುವಾಗ ಸರ್ಕಾರವನ್ನು ಕೇಳುವುದಿಲ್ಲವೇ, ನಿಮ್ಮನ್ನು ಕೇಳದೆ ಸ್ವತಂತ್ರವಾಗಿ ರಾಜ್ಯಪಾಲರೇ ಉಪಕುಲಪತಿಗಳನ್ನು ನೇಮಕ ಮಾಡಿಬಿಡುತ್ತಾರೋ? ಇವರನ್ನು ಕೇಳದೆ ಇದೆಲ್ಲಾ ನಡೆಯುತ್ತಿದೆಯೋ? ನಾವೂ ಸಹ ವಿಶ್ವವಿದ್ಯಾನಿಲಯದಲ್ಲೇ ಓದಿರತಕ್ಕವರು, ಇದೆಲ್ಲಾ ನಮಗೆ ಗೊತ್ತಿದೆ. ಈ ರೀತಿ ಜಾರಿಕೊಳ್ಳತಕ್ಕಂಥ ಉತ್ತರವನ್ನು ನಾನು ಈ ಸರ್ಕಾರದಿಂದ ನಿರೀಕ್ಷೆ ಮಾಡಿರಲಿಲ್ಲ. ಅದು ನಾನು ನಮ್ಮ ಸ್ನೇಹಿತರಾದ ಸೋಮಶೇಖರ್‌ರವರು ಜೊತೆಯಲ್ಲೇ ಓದಿದಂತಹವರು, ಅದೇ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನಾವು. ಇವರಿಂದ ನಾನು ಖಂಡಿತ ಇಂತಹ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದು ಹೇಳಿದರೆ ಅವರಿಗೂ ಪ್ರಾಮಾಣಿಕವಾದಂಥ ಕಾಳಜಿ ಇದೆ, ಅದೇ ವಿಶ್ವವಿದ್ಯಾನಿಲಯದಲ್ಲಿ ಓದಿದಂತಹವರು. ಅದೇ ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಬರತಕ್ಕಂಥವರು, ಇವರಾದರೂ ಪ್ರಾಮಾಣಿಕವಾಗಿ ಹೇಳುತ್ತಾರೆ ಎಂದು ನಿರೀಕ್ಷೆ ಮಾಡಿದರೆ ಅದೇ ಉತ್ತರವೇ. ಈ ಉತ್ತರವನ್ನು ಯಾವ ಮಂತ್ರಿ ಬೇಕಾದರೂ ಕೊಡುತ್ತಾರೆ, ನಮ್ಮ ಸೋಮಶೇಖರ್‌ರವರೇ ಕೊಡತಕ್ಕಂಥ ಅವಶ್ಯಕತೆ ಇಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ನಾನು ಆರೋಪ ಮಾಡಿದ್ದೇನೆ, ನಾನು ಆರೋಪ ಮಾಡಿರುವಂಥದ್ದು ನೂರಕ್ಕೆ ನೂರು ಸತ್ಯ, ಇದನ್ನು ಒಪ್ಪಿ ಎಂದು ನಾನು ಸರ್ಕಾರಕ್ಕೆ ಹೇಳುತ್ತಿಲ್ಲ. ನಾನು ಏನು ಹೇಳುತ್ತಿದ್ದೇನೆ, ನಾನು ದಾಖಲೆ ಸಮೇತ ನಿಮ್ಮ ಮುಂದೆ ಇಟ್ಟಿದ್ದೇನೆ, ತಾರೀಖಿನ ಪ್ರಕಾರ ಏನೇನು ಆಗಿದೆ ಎಲ್ಲೆಲ್ಲಿ ಹಣ ದುರುಪಯೋಗ ಆಗಿದೆ ಎಂದು. ನೀವು ಎರಡು ಸಮಿತಿಯನ್ನು ನೇಮಕ ಮಾಡಿ ತನಿಖೆಯನ್ನು ಮಾಡಿದ್ದೇವೆ ಆಯಿತು ಸನ್ಮಾನ್ಯ ಉಪಾಧ್ಯಕ್ಷರೇ, ಇವರ ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ, ಕೆ.ಕೆ. ಮಿಶ್ರಾ ಸಮಿತಿ ಮತ್ತು ಶರ್ಮಾ ಸಮಿತಿ ವರದಿ ಕೊಟ್ಟಿದೆ ಅದನ್ನು ನಾವು ಇನ್ನೂ ನೋಡಿಲ್ಲ ಎಂದು ಹೇಳಿದರೆ ಆ ಸಮಿತಿಯನ್ನು ಇವರು ಏತಕ್ಕೆ ನೇಮಕ ಮಾಡಬೇಕಾಗಿತ್ತು? ಅವರು ಕೊಟ್ಟಂಥ ವರದಿಯನ್ನು ನೋಡಲಿಕ್ಕೆ ಅವಧಿ ಇಲ್ಲದೇ ಇರತಕ್ಕಂಥ ಜನ ಆ ಸಮಿತಿಯನ್ನಾದರೂ ಏಕೆ ನೇಮಕ ಮಾಡಬೇಕಾಗಿತ್ತು? ಅದನ್ನು ನೋಡಿ ಆಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ಇನ್ನೂ ಏನಾದರೂ ಆಪಾದನೆಗಳು ಇದ್ದರೆ ಮತ್ತೆ ನಾನು ತನಿಖೆ ಮಾಡುತ್ತೇನೆ, ಆಷ್ಟೊತ್ತಿಗೆ ಮಾದಯ್ಯನವರ ಅವಧಿ ಮುಗಿದುಹೋಗಿರುತ್ತದೆ, ಅವರು ಮನೆಗೆ ಹೋಗಿರುತ್ತಾರೆ. ಆಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಅಪಾದನೆಗಳ ತನಿಖೆಯೂ ಇಲ್ಲ, ಅದರ ಸತ್ಯಾಸತ್ಯತೆಯೂ ಇಲ್ಲ; ಯಾವ ಕಾನೂನಿನ ಅಡಿಯಲ್ಲಿ ಇವೊತ್ತು ಮೈಸೂರು ವಿಶ್ವವಿದ್ಯಾನಿಲಯ ರಚನೆಯಾಗಿದೆಯೋ, ಆ University Actನಲ್ಲಿ ಎಲ್ಲಾದರೂ ಸರ್ಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬಾರದು ಅದು ಕಾನೂನಿಗೆ ವಿರುದ್ಧವಾಗುತ್ತದೆ, University Actಗೆ ವಿರುದ್ಧ

ಆಗುತ್ತದೆ ಎಂದು ಹೇಳಿ ನೀವೇನಾದರೂ ಹೇಳುವುದಾದರೆ ಈ Actಗೆ ನೀವೇನು ಹೇಳುತ್ತೀರಿ ಸ್ವಾಮಿ? "ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಯಿದೆ 12(3)ನೇ ವಿಧಿಯ ಅನ್ವಯ ಕಾಯಿದೆಯ ಎಲ್ಲಾ ವಿಧಿಗಳ ಸನ್ನಡೆಗಳನ್ನು ಸುಗ್ರಿವಾಜ್ಞೆಗಳು ನೀತಿಗಳನ್ನು ಮತ್ತು ನಿಯಮಗಳ ಪಾಲನೆಯಾಗುವುದಕ್ಕೆ ಉಪಕುಲಪತಿ ನೋಡಿಕೊಳ್ಳಬೇಕು. ಆದರೆ ಈ ಆರೋಪ ಪಟ್ಟಿಯಲ್ಲಿ ತಿಳಿಸಿರುವಂತೆ ಮೇಲಿನ ಎಲ್ಲಾ ನಿಯಮಗಳ ಪಾಲನೆ ಜಾರಿಯಾಗುವಂತೆ ನೋಡಿಕೊಂಡಿಲ್ಲ. ಆದ್ದರಿಂದ ಶಾಸನದನ್ವಯ ನೇಮಕಗೊಂಡ ಅಧಿಕಾರಿ ಪ್ರೊಃ ಮಾದಯ್ಯನವರು ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲಗೊಂಡಿರುವುದರಿಂದ ಕರ್ನಾಟಕ". ನಾನು ಸೆಕ್ಷನ್ ಹೇಳುತ್ತಿದ್ದೇನೆ, ಯಾವ ಸೆಕ್ಷನ್‌ನಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಎಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 11(2)(4)ನೇ ವಿಧಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಏಕೆ ತೆಗೆದುಕೊಳ್ಳಬಾರದು? University Actನಲ್ಲಿ ಇದಕ್ಕೆ ಪ್ರಾವಿಷನ್ ಇಲ್ಲವೇ? ಏತಕ್ಕೆ ನೀವು ಮುಚ್ಚಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ? ಇದು University Act, ಈ Actನಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಕ್ಲಿಯರ್ ಪ್ರಾವಿಷನ್ ಇದೆ. ನಮಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಗೆ ನೀವು ಹೇಳುತ್ತೀರಿ? ನೇರವಾಗಿ ಹಸ್ತಕ್ಷೇಪ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಗೆ ನೀವು ಹೇಳುತ್ತೀರಿ. . .

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ):- ಸನ್ಮಾನ್ಯ ಉಪಾಧ್ಯಕ್ಷರೇ ನಾನು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೆಂಬರ್ ಸಹ ಇದ್ದೇನೆ. ಈಗ ನಮ್ಮ ಸಹೊದ್ಯೋಗಿಗಳು ಏನು ಆಪಾದನೆಯನ್ನು ಮಾಡಿದರು ಇದು ಅಲ್ಲಿ ಒಂದು ಗುಂಪುಗಾರಿಕೆ ಇದೆ, ಅಲ್ಲಿನ ಉಪಕುಲಪತಿಗಳ ಮೇಲೆ ನೇರವಾಗಿ ಆಪಾದನೆ ಏನು ಆಗುತ್ತಿದೆ ಇದಕ್ಕೆ ಬೇರೆ ಗುಂಪು ಇದರಲ್ಲಿ ಬಹಳಷ್ಟು ಕೆಲಸ ಮಾಡುತ್ತಿರುವುದರಿಂದ, ಉಪಕುಲಪತಿಗಳ ಮೇಲೆ ನೇರವಾಗಿ ಆಪಾದನೆಯನ್ನು ಮಾಡಿ, ಉಪ ಕುಲಪತಿ, ಉಪಕುಲಪತಿ ಎಂದು ಹೇಳುವುದಕ್ಕೆ ಬದಲಾಗಿ ಗುಂಪುಗಾರಿಕೆ ಯಾರು ಮಾಡುತ್ತಿದ್ದಾರೆ. .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಗುಂಪುಗಾರಿಕೆ ಇದ್ದರೆ ಆಪವಾದ ಇದೆ, ಇದಕ್ಕೆ ದಾಖಲೆ ಇದೆ, ಗುಂಪುಗಾರಿಕೆಗೂ, ಆಪಾದನೆಗೂ ಏನಾದರೂ ಸಂಬಂಧ ಇದೆಯೇ ದಯವಿಟ್ಟು ಹೇಳಿ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ಪುಟ್ಟೇಗೌಡರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅದನ್ನು ಕೇಳುತ್ತಿದ್ದೆ. ಒಂದು ಕಾಲದಲ್ಲಿ ಮಾನ್ಯ ಉಪಾಧ್ಯಕ್ಷರೇ, ಉಪಕುಲಪತಿಗಳು ಅಂದರೆ ನಾವು ಸುಪ್ರಿಂಕೋರ್ಟ್ ಜಡ್ಜಸ್‌ಗಿಂತ ಹೆಚ್ಚು ಗೌರವದಿಂದ ನೋಡು-ತ್ತಿದ್ದೆವು, ಆ ಕಾಲ ಈಗ ಅಲ್ಲ. ಆದರೆ ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಷ್ಟೊಂದು ಅವ್ಯವಹಾರಗಳು ನಡೆದಿದ್ದಾವೆ ಎಂದು ಮಾನ್ಯ ಸದನದ ಸದಸ್ಯರು ಮತ್ತು ಬೇರೆ ಸಿಂಡಿಕೇಟ್ ಮೆಂಬರ್ಸ್ ದೂರು ಕೊಟ್ಟಿದ್ದಾರೆ ಎಂದು ಹೇಳಿದಮೇಲೆ ನಮಗೆ ನೇರವಾಗಿ ವಿಶ್ವವಿದ್ಯಾನಿಲಯ

ನಮ್ಮ ಕಂಟ್ರೋಲ್‌ಗೆ ಬರುವುದಿಲ್ಲ. ನಾವು ಏನಿದ್ದರೂ ರಾಜ್ಯಪಾಲರಿಗೆ, the Governor is the Head of that Institution and it is autonomous in every sense,... University Act ಪ್ರಕಾರ ನಾವು ದುಡ್ಡು ಯಾವುದಕ್ಕೆ ಕೊಡುತ್ತೇವೆ ಅಥವಾ ಕಾನೂನು ಮತ್ತು ಸುವ್ಯವಸ್ಥೆಯನ್ನು ಮೇಂಟೈನ್ ಮಾಡುವ ವಿಷಯ ಬಂದಾಗ the Vice-Chancellor will be answerable to Government through the Governor, ಆದ್ದರಿಂದ ಹೋದ ಸಿಂಡಿಕೇಟ್ ಮೆಂಬರ್ಸ್ ದೂರು ಕೊಟ್ಟಾಗ ಏನು ಕಮಿಟಿಯನ್ನು ನೇಮಕ ಮಾಡಿದ್ದರು, that appointment was also made by the Governor. ಆ ರಿಪೋರ್ಟ್ ಬಂದಮೇಲೆ ರಾಜ್ಯಪಾಲರು ಏನಾದರೂ ಸರ್ಕಾರಕ್ಕೆ you take such and such a action ಎಂದು ಹೇಳಿದರೆ ನಾವು ತಕ್ಷಣ ಮಾಡುತ್ತೇವೆ ಅಥವಾ ತಾವುಗಳೆಲ್ಲಾ ಇಷ್ಟೊಂದು ಹೇಳಿರುವುದರಿಂದ we may write to Governor to take immediate action beyond that nothing is possible.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅದನ್ನಾದರೂ ಸ್ಪಷ್ಟವಾಗಿ ಹೇಳಬೇಕು. ಈಗ ನಾವು ರಾಜ್ಯಪಾಲರನ್ನು ಕೇಳುತ್ತೇವೆ, ಇದನ್ನು ಸರ್ಕಾರದ ಮುಖಾಂತರ ರಾಜ್ಯಪಾಲರಿಗೆ ನಾವು ಬರೆಯುತ್ತೇವೆ ಇದರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ, we may write you may not write also...

ಶ್ರೀ ಬಿ. ಸೋಮಶೇಖರ್:- ನಾನು ಸ್ಪಷ್ಟೀಕರಣವನ್ನು ನೀಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಉಪಕುಲಪತಿಗಳನ್ನು ನೇಮಕ ಮಾಡತಕ್ಕಂಥದ್ದು ಸರ್ಕಾರ ಅಲ್ಲ. ರಾಜ್ಯಪಾಲರೇ ಮೂರು ಜನರ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿರುತ್ತಾರೆ. ಆ ಮೂರು ಜನ ಎಕ್ಸ್‌ಪರ್ಟ್ ಕಮಿಟಿಯವರು ಪ್ಯಾನಲ್‌ಅನ್ನು ರಾಜ್ಯಪಾಲರಿಗೆ ಕಳುಹಿಸಿಕೊಡುತ್ತಾರೆ. ರಾಜ್ಯಪಾಲರು ನೇಮಕ ಮಾಡುತ್ತಾರೆ. ಆದ್ದರಿಂದ ಉಪಕುಲಪತಿಗಳ ನೇಮಕಾತಿಯಲ್ಲಿ ಸರ್ಕಾರದ ಯಾವುದೇ ಹಸ್ತಕ್ಷೇಪ ಇಲ್ಲ. ಇದು ಒಂದನೆಯದು, ಎರಡನೆಯದಾಗಿ, ಕೆ.ಕೆ. ಮಿಶ್ರಾ ಕಮಿಟಿಯವರು ಏನು ಹೇಳಿದ್ದಾರೆ ಆ ಮಿಶ್ರಾರವರನ್ನು ಇವರ ಅಲಿಗೇಷನ್ ಮೇಲೆ ವಿಚಾರಣೆ ಮಾಡಿ ಎಂದು ಇಲ್ಲಿ ಹೇಳಿರಲಿಲ್ಲ. ಏನು ಸಿಂಡಿಕೇಟ್ ಮೀಟಿಂಗ್‌ನಲ್ಲಿ ಕಾನ್ಫ್ಲೋಕೇಷನ್ ವಿಷಯದಲ್ಲಿ ಸ್ವಲ್ಪ ಗಲಾಟೆಯಾಯಿತು ಅದರ ಒಂದು ವಿಚಾರಣೆ ಮಾಡಬೇಕು ಎಂದು ಹೇಳಿ ಮಾಡಿದ್ದರು. ಅದರ ವರದಿಯನ್ನು ಈಗಾಗಲೇ ಸರ್ಕಾರ ಪರಿಶೀಲನೆ ಮಾಡಿ ನಮ್ಮ ಛಾನ್ಸಲರ್‌ಗೆ ಕಳುಹಿಸಿಕೊಟ್ಟು ಅದರ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈಗೇನು ಇವರು ಎತ್ತಿದ್ದಾರೆ ಆ ವಿಚಾರವನ್ನು ಇವರು ಕೊಟ್ಟರೆ, ನೇರವಾಗಿ ನಾವು ಆ ವಿಚಾರಣೆಯನ್ನು ಇನಿಷಿಯೇಟ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರನ್ನು ನೇಮಕ ಮಾಡಿರುವಂಥವರು ರಾಜ್ಯಪಾಲರು, ಸರ್ಕಾರ ಅಲ್ಲ. ಆದ್ದರಿಂದ ಏನೇ ವಿಚಾರಣೆ ಮಾಡಬೇಕಾದರೂ ರಾಜ್ಯಪಾಲರವರೇ ಮಾಡಬೇಕಾಗುತ್ತದೆ. ಆದ್ದರಿಂದ ನಾವೂ ಅವರನ್ನು ಕೇಳಬಹುದು, ಇಂತಹ ಅಲಿಗೇಷನ್ ಬಂದಿದೆ ನೀವು ಇದನ್ನು ವಿಚಾರಣೆ ನಡೆಸಬಹುದು ಎಂದು. ಅದರ ಬಗ್ಗೆ ಅವರೇನೂ ಅನುಮಾನ ಪಡಬೇಕಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಉಪಾಧ್ಯಕ್ಷರೇ, ನಾನು ಹೇಳಿದೆ ಈಗ University Act, 11(2)(4)ರಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ಸ್ಪಷ್ಟವಾಗಿ ನಾನು ಹೇಳಿದ್ದೇನೆ. ಈಗ ಅವರು ರಾಜ್ಯಪಾಲರಿಗೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಬರೆಯುತ್ತೇವೆ ಎಂದು ಹೇಳಲಿ. . .

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಮಾತೆತ್ತಿದರೆ ಉಪಕುಲಪತಿಗಳ ಮೇಲೆ ಹೇಳುತ್ತಿದ್ದಾರೆ. ಉಪಕುಲಪತಿಗಳದ್ದು ಏನೂ ತಪ್ಪಿಲ್ಲ. ಉಪಕುಲಪತಿಗಳು ಕೆಲಸ ಮಾಡುವುದಕ್ಕೆ ಬೇರೆಯವರು ಎಲ್ಲಿ ಅವಕಾಶ ಮಾಡಿಕೊಡುತ್ತಾರೆ. . .

ಉಪಾಧ್ಯಕ್ಷರು:- ಈಗ ಸದನವನ್ನು ನಾಳೆ ಮುಂಜಾನೆ 9.30 ರವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 9 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 10ನೇ ಆಗಸ್ಟ್ ಮಾಹೆ 1996ನೇ ಶನಿವಾರದಂದು ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)